ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 10, ಆಗಸ್ಟ್ 2025
SHRIDEVI ANTARANGA
Monthly Magazine



SHRIDEVI
EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್ ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**ಈ ಸಮೀಕ್ಷೆಯಲ್ಲಿ ಒಟ್ಟು 27.24 ಲಕ್ಷ ಪರಿಶಿಷ್ಟ ಕುಟುಂಬಗಳು ಅಂದರೆ 1.07 ಕೋಟಿ ಜನರು ಇದರಲ್ಲಿ ಪಾಲುಗೊಂಡಿದ್ದಾರೆಂದು ಹೇಳಲಾಗಿದೆ.**

## ಪರಿಶಿಷ್ಟ ಜಾತಿಯಲ್ಲಿನ ಒಳಮೀಸಲಾತಿಯ ಹೋರಾಟ - ಫಲಶ್ರುತಿ



**ಒಂದು ಸಮೀಕ್ಷೆ:**

2025 ಆಗಸ್ಟ್ 4ರಂದು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ಆಯೋಗ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ತನ್ನ ವರದಿಯನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದೆ. ಈ ಆಯೋಗ ತನ್ನ ಕಾರ್ಯವನ್ನು ಸುಮಾರು ಆರು ತಿಂಗಳ ಕಾಲ ಮಾಡಿದೆ. ಪರಿಶಿಷ್ಟ ಜಾತಿಯ ಜನರ ಮನೆಮನೆಗೂ ಭೇಟಿ ನೀಡಿ ಮಾಹಿತಿ ಸಂಗ್ರಹ ಸಂಗ್ರಹಿಸಿದೆ. ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಮಿಕ್ಕೆಲ್ಲ ಕಡೆ ಶೇಕಡ 99 ಹೆಚ್ಚಿನ ಪ್ರಮಾಣದಲ್ಲಿ ಸಮೀಕ್ಷಾ ಕಾರ್ಯವನ್ನು ಕೈಗೊಂಡಿದೆ ಎಂದು ಆಯೋಗ ತನ್ನ ವರದಿಯಲ್ಲಿ ಹೇಳಿದೆ. ಇದೇ ಸಂದರ್ಭದಲ್ಲಿ ಹೇಳಬೇಕಾಗಿರುವ ಮಾತೆಂದರೆ ಇಂತಹ ಮಹತ್ತ್ವದ ಕಾರ್ಯವನ್ನು ನಿರ್ವಹಿಸುವಲ್ಲಿ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಸರ್ಕಾರದಿಂದ ಯಾವುದೇ ಸಂಭಾವನೆಯನ್ನು ಪಡೆದಿಲ್ಲ. ಶೋಷಿತ ಸಮಾಜಕ್ಕೆ ಸಲ್ಲಿಸುವ ಸೇವೆ ಎಂದು ಅವರು ಭಾವಿಸಿದ್ದಾರೆ. ಇದೊಂದು ಅಭಿನಂದನಾರ್ಹ ವಿಚಾರ.

ಈ ಸಮೀಕ್ಷೆಯಲ್ಲಿ ಒಟ್ಟು 27.24 ಲಕ್ಷ ಪರಿಶಿಷ್ಟ ಕುಟುಂಬಗಳು ಅಂದರೆ 1.07 ಕೋಟಿ ಜನರು ಇದರಲ್ಲಿ ಪಾಲುಗೊಂಡಿದ್ದಾರೆಂದು ಹೇಳಲಾಗಿದೆ. ಪರಿಶಿಷ್ಟ ಜಾತಿಯಲ್ಲಿ 53,65,014 ಪುರುಷರಿದ್ದರೆ, 53,33,273 ಮಹಿಳೆಯರಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ 75.63 ಜನರು ವಾಸವಾಗಿದ್ದಾರೆ. ನಗರ ಪ್ರದೇಶದಲ್ಲಿ ಶೇಕಡ24.33 ಜನರು ವಾಸವಾಗಿದ್ದಾರೆ. ಈ ಪರಿಶಿಷ್ಟ ಜಾತಿಯಲ್ಲಿ ಮಾದಿಗರು (ಎಡಗೈ) 27,73,780. ಇವರದು ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಗರಿಷ್ಠ ಪ್ರಮಾಣ. ಹೊಲೆಯರು (ಬಲಗೈ) 24,72,103. ಬಂಜಾರರು 14,05,272, ಭೋವಿ 11,29,301 ಭಾಂಬಿ 5,10,454, ಚಲವಾದಿ 3,76,448, ಬೇಡಜಂಗಮ 3,22,049, ಆದಿದ್ರಾವಿಡ 3,20,641, ಕೊರಮ 2,43,620, ಪರೈಯನ್, ಪರಯ 1,61,164 ಆದಿಕರ್ನಾಟಕ 1,47,199 ಮೊದಲಾದ ಜಾತಿಗಳನ್ನು ಆಯೋಗ ಗುರುತಿಸಿದೆ.


ಪರಿಶಿಷ್ಟ ಜಾತಿಯಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ ಇರುವವರನ್ನು ಆಯೋಗ ಗುರುತಿಸಿದೆ. ಅವುಗಳಲ್ಲಿ ಕೆಲವು ಹೀಗಿವೆ.

ಕೆ. ಪ್ಯಾರಿಸ್ (6), ಮಾಲ ಹನ್ನಯ್ (8), ಕೋಲುಪುಲುವಂದ್ಲು (18), ಮಸ್ತಿ (33), ಮಾಲಾ ಮಸ್ತಿ (38), ಮನ್ನೆ (51), ಬಿಂದ್ಲ(52), ಸಪರಿ (55), ಲಿಂಗದೇರ್ (60). ಮಾಲಜಂಗಮ (62), ಮವಿಲನ್ (66) ಮಾಲೆ ಸಾಲೆ, ನೆಟ್ಕನಿ (67), ಚಾಂಡಾಲ (76), ಕಡೆಯಾನ್ (76), ಎಲ್ಲಮಲ್ವರ್, ಯಲ್ಲಮ್ಮಲವಂಡ್ಲು (80), ಪಣಿಯಂದಿ (93) ಮತ್ತು ಸಾಂಬನ್ (93) ಮೊದಲಾದ ಸಣ್ಣ ಸಣ್ಣ ಉಪಜಾತಿಗಳನ್ನು ನಾಗಮೋಹನ್‌ದಾಸ್ ಆಯೋಗ ಗುರುತಿಸಿದೆ. ಇದೊಂದು ಸುತ್ಯಾರ್ಹ ಪ್ರಯತ್ನವಾಗಿದೆ.

▸▸ 2ನೇ ಪುಟಕ್ಕೆ...

# ಅವಧೂತ ಗಟ್ಟಹಳ್ಳಿ ಶ್ರೀಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ

▪ ವಿ.ಕೃಷ್ಣ




**ಗ್ರಂಥದ ಪರಿಚಯ**

ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಗಳ ಆವರಣದಲ್ಲಿ ನೆಲೆಗೊಂಡಿರುವ ಶ್ರೀ ದುರ್ಗಾಂಬಿಕಾದೇವಿ ಮತ್ತು ಶ್ರೀರಮಣ ಮಹರ್ಷಿಗಳ ಹೆಸರಿನಲ್ಲಿ ಒಂದು ಪ್ರಶಸ್ತಿಯನ್ನು ಈ ವಿದ್ಯಾಸಂಸ್ಥೆ ಮತ್ತು ಶ್ರೀದೇವಿ ಚಾರಿಟಬಲ್ ಟ್ರಸ್ಟ್ ನೀಡುತ್ತಾ ಬಂದಿವೆ. ಇದನ್ನು ಲೌಕಿಕ ಜಗತ್ತಿನಲ್ಲಿದ್ದರೂ ಅಧ್ಯಾತ್ಮ ಸಾಧಕರಾಗಿ ಸಮಾಜಮುಖಿ ಚಿಂತನೆಗಳನ್ನು ಹೊಂದಿರುವ ಅಪರೂಪದ ಚೇತನಗಳಿಗೆ ನೀಡಲಾಗುತ್ತಿದೆ. ಈ ವರ್ಷ ಅವಧೂತ ಗಟ್ಟಹಳ್ಳಿ ಪೂಜ್ಯ ಶ್ರೀ ಅಂಜನಪ್ಪಸ್ವಾಮಿಗಳ ಪರಂಪರೆಯಲ್ಲಿ ಬೆಳೆದು ಬಂದಿರುವ ಡಾ. ಬಿ.ಆರ್. ಜಯಮ್ಮ ಅವರಿಗೆ ಸೆಪ್ಟೆಂಬರ್ 6ರಂದು ನಡೆಯುವ ಸಮಾರಂಭವೊಂದರಲ್ಲಿ ನೀಡಲಾಗುವುದು. ಈ ಸಮಾರಂಭಕ್ಕೆ ಶೋಭೆಯನ್ನು ತರುವ ರೀತಿಯಲ್ಲಿ ಡಾ. ಕೆ.ಆರ್. ಕಮಲೇಶ್ ಅವರು ರಚಿಸಿರುವ **'ಶ್ರೀ ಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ'** ಎಂಬ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಗುತ್ತದೆ. ಈ ಸರಳ, ಆದರೆ ಅತ್ಯಂತ ಮಹತ್ವದ ಪುಸ್ತಕದ ಒಂದು ಸ್ಥೂಲ ಪರಿಚಯವೇ ಈ ಲೇಖನ. ಆಂಜನೇಯನ ಅವತಾರವೆಂದೇ ಪರಿಗಣಿಸಲ್ಪಟ್ಟಿರುವ ಗಟ್ಟಹಳ್ಳಿ ಶ್ರೀಅಂಜನಪ್ಪಸ್ವಾಮಿಗಳು ಅವಧೂತ ಪರಂಪರೆಯಲ್ಲಿ ಬಂದ ಇತ್ತೀಚಿನ ಒಂದು ಕೌಸ್ತುಭಮಣಿ. ಅವರ ಮಹಿಮೆಯನ್ನು ಈ ಪುಟ್ಟ ಲೇಖನದಲ್ಲಿ ಸಮಗ್ರವಾಗಿ ವಿವರಿಸುವುದು ಅಸಾಧ್ಯ.

**ಗಟ್ಟಹಳ್ಳಿಯಲ್ಲಿ ಒಬ್ಬರು ಅವಧೂತರು**

ಬಡತನ ಎನ್ನುವುದು ಅವಧೂತರಂತಹ ಮಹಾಮಹಿಮರ ಕುಟುಂಬಕ್ಕೆ ಸಾಮಾನ್ಯವಾಗಿ ಒದಗಿ ಬರುವಂತಹ ಸನ್ನಿವೇಶ. ಅಂತಹ ಕುಟುಂಬದಲ್ಲಿ ಹುಟ್ಟಿ, ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು, ಕರ್ನಾಟಕಕ್ಕೆ ವಲಸೆ ಬಂದು, ಆಂಜನೇಯನ ಭಕ್ತಶಿರೋಮಣಿಯಾಗಿ, ಶಾಲೆಯ ಮೆಟ್ಟಿಲನ್ನೇ ಹತ್ತದೆ ಸಂಸ್ಕಾರದ ಬಲದಿಂದ, ಅತ್ಯುತ್ತಮ ವಾಗ್ಗೇಯಕರಾಗಿ, ಉತ್ತಮ ಹಾಡುಗಾರರಾಗಿ ಭಕ್ತರಿಗೆ ಅಧ್ಯಾತ್ಮ ಗುರುವಾಗಿ, ಸಾಮಾನ್ಯರ ಸಂಕಷ್ಟಗಳನ್ನು ಪರಿಹಾರಕರಾಗಿ ಒಂದು ಶತಮಾನಕ್ಕೂ ಹೆಚ್ಚುಕಾಲ ಈ ನೆಲದಲ್ಲಿ ಬಾಳಿದ ಮಹಾನುಭಾವರು ಶ್ರೀ ಅಂಜನಪ್ಪಸ್ವಾಮಿಗಳು. ಅವರು ಬಾಲ್ಯದಲ್ಲಿಯೇ ಸಾಕ್ಷಾತ್ ಆಂಜನೇಯನ ದರ್ಶನ ಪಡೆದು, ಪರಶಿವನಿಂದ ಬೀಜಾಕ್ಷರವನ್ನು ನಾಲಗೆಯ ಮೇಲೆ ಬರೆಸಿಕೊಂಡು, ತಾನಾಗಿಯೇ ಹುಡುಕಿಕೊಂಡು ಬಂದ ರಾಮಕೃಷ್ಣ ಆಚಾರ್ಯರಿಂದ ದೀಕ್ಷೆಯನ್ನು ಪಡೆದು ಸ್ವಾರ್ಥದ ಸೋಂಕಿಲ್ಲದೆ, ಶ್ರೀ ರಮಣ ಮಹರ್ಷಿಗಳಂತೆಯೇ ಬಾಳಿದರು. ಮಮತೆಯೇ ಮೈವೆತ್ತಿದಂತೆ ಇದ್ದ ಅವರು, ವ್ಯಕ್ತಿಗಳ ಸ್ಥಾನಮಾನವನ್ನು ಗಮನಿಸದೆ ಅನೇಕರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ ಅವರನ್ನು ಉದ್ಧರಿಸಿದರು. ಸ್ವಾಮೀಜಿಯವರು ಆಂಜನೇಯನ ಆದೇಶದಂತೆ, ಶಿಷ್ಯರ ನೆರವಿನೊಂದಿಗೆ ದೇವಸ್ಥಾನವನ್ನು ನಿರ್ಮಿಸಿ ಅಲ್ಲಿ ಹಲವಾರು ದೇವತೆಗಳನ್ನು ಸ್ಥಾಪಿಸಿದರು.




ಶಾಲಾಶಿಕ್ಷಣವಿಲ್ಲದ ಶ್ರೀ ಅಂಜನಪ್ಪಸ್ವಾಮಿಗಳು ಬಾಲ್ಯದಲ್ಲಿಯೇ ಆಶುಕವಿಗಳಾಗಿದ್ದರಷ್ಟೇ ಅಲ್ಲದೆ ತತ್ವಜ್ಞಾನ ತಿಳಿದ ದಾರ್ಶನಿಕ ಮಹನೀಯರೂ ಆಗಿದ್ದರು. ಮನೆಯ ಮಾತು, ಪರಿಸರದ ಮಾತು ಕೂಡ ತೆಲುಗೇ ಅಗಿದ್ದುದರಿಂದ, ಆ ಭಾಷೆಯಲ್ಲಿ ಅವರು ಸುಲಲಿತವಾಗಿ ಆಶುಕವಿತೆಗಳನ್ನು ರಚಿಸಿ ತಮ್ಮಲ್ಲಿಯೇ ಹಾಡಿಕೊಳ್ಳುತ್ತಿದ್ದರು, ತತ್ವಪದಗಳನ್ನೂ ರಚಿಸಿದರು. ದೇಶಭಾಷೆಯಾದ ಕನ್ನಡದಲ್ಲಿಯೂ ಅವರು ಕೆಲವು ತತ್ತ್ವಪದಗಳನ್ನು ರಚಿಸಿದ್ದಾರೆ. ಅವರ ಪದಗಳಲ್ಲಿ ಸರಳತೆ, ಲಾಲಿತ್ಯಗಳು ತತ್ತ್ವಗಳೊಂದಿಗೆ ಹಾಲಿನಲ್ಲಿ ಜೇನು ಬೆರತಂತೆ ಬೆರೆತಿವೆ. ಭಕ್ತಿ, ವೇದಾಂತಗಳಷ್ಟೇ ಅಲ್ಲದೆ ಮನುಷ್ಯ ತನ್ನ ದೈನಂದಿನ ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ ಅವರು ತಮ್ಮ ಪದಗಳಲ್ಲಿ ತಿಳಿಸಿದ್ದಾರೆ. ಪಾರಂಪರಿಕ ದೃಷ್ಟಿಯಿಂದ ಅವರು ಜ್ಞಾನಿಗಳಾಗಿದ್ದರೂ, ವ್ಯಾವಹಾರಿಕದಲ್ಲಿ ಅವರು ಸಮಾಜದ ಅನಿಷ್ಟ ಪದ್ಧತಿಯನ್ನು, ಮುಖ್ಯವಾಗಿ ಜಾತಿಪದ್ಧತಿಯನ್ನು, ಕಠಿಣವಾಗಿ ಖಂಡಿಸುತ್ತಿದ್ದರು. ಕಾವ್ಯ ಹಾಗೂ ಸಂಗೀತದ ದೃಷ್ಟಿಯಿಂದ ಅವರ ಪದಗಳು ಮನೋಹರವಾಗಿವೆ.

▸▸ 8ನೇ ಪುಟಕ್ಕೆ...

# ಪರಿಶಿಷ್ಟ ಜಾತಿಯಲ್ಲಿನ ಒಳಮೀಸಲಾತಿಯ ಹೋರಾಟ - ಫಲಶ್ರುತಿ

## ಆಯೋಗ ಸೂಚಿಸಿರುವ ಮೀಸಲಾತಿ ಪ್ರಮಾಣ

- **ಪ್ರವರ್ಗ 'ಎ' ಜಾತಿ 59, ಜನಸಂಖ್ಯೆ 4.97, ಮೀಸಲಾತಿ ಪ್ರಮಾಣ ಶೇಕಡ 1**
- **ಪ್ರವರ್ಗ 'ಬಿ' ಜಾತಿ 18, ಜನಸಂಖ್ಯೆ 34.91 ಮೀಸಲಾತಿ ಪ್ರಮಾಣ ಶೇಕಡ 6**
- **ಪ್ರವರ್ಗ 'ಸಿ' ಜಾತಿ 17, ಜನಸಂಖ್ಯೆ 28.63 ಮೀಸಲಾತಿ ಪ್ರಮಾಣ ಶೇಕಡ 5**
- **ಪ್ರವರ್ಗ 'ಡಿ' ಜಾತಿ 04, ಜನಸಂಖ್ಯೆ 26.97 ಮೀಸಲಾತಿ ಪ್ರಮಾಣ ಶೇಕಡ 4**
- **ಪ್ರವರ್ಗ 'ಇ' ಜಾತಿ 03, ಜನಸಂಖ್ಯೆ 4.52 ಮೀಸಲಾತಿ ಪ್ರಮಾಣ ಶೇಕಡ 1**

▶▶ ಮೊದಲನೇ ಪುಟದಿಂದ

### ಹಿಂದಿನ ಪ್ರಯತ್ನಗಳು:

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗಕ್ಕೆ ಮೊದಲು ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಅನೇಕ ಪ್ರಯತ್ನಗಳು ನಡೆದಿದ್ದವು. 2004–05ರಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರ ಅಧ್ಯಕ್ಷತೆಯಲ್ಲಿ ಒಳಮಿಸಲಾತಿ ಅಧ್ಯಯನಕ್ಕೆ ಕರ್ನಾಟಕ ಸರ್ಕಾರ ಆಯೋಗ ರಚಿಸಿತ್ತು. ಇದೇ ಸಂದರ್ಭದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ಒಳಮೀಸಲಾತಿ ಕುರಿತಾದ ತೀರ್ಪು ಸಹ ಪ್ರಕಟಗೊಂಡಿತ್ತು. ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಅವಧಿಯಲ್ಲಿ ಕಾನೂನು ಸಚಿವರಾಗಿದ್ದ ಜೆ.ಸಿ. ಮಾಧುಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿ ಕಲ್ಪಿಸಬೇಕೆಂಬ ಉದ್ದೇಶದಿಂದ ಸಚಿವ ಸಂಪುಟದ ಉಪಸಮಿತಿ ರಚನೆಯಾಗಿತ್ತು. ಕರ್ನಾಟಕ ಸರ್ಕಾರದಲ್ಲಿ ಮುಖ್ಯ ಕಾರ್ಯದರ್ಶಿಯಾಗಿದ್ದ ಹಿರಿಯ ಐಎಎಸ್ ಅಧಿಕಾರಿ ಶ್ರೀಮತಿ ರತ್ನಪ್ರಭಾ ಅವರ ಅಧ್ಯಕ್ಷತೆಯಲ್ಲಿ ಒಳಮೀಸಲಾತಿ ಕುರಿತಂತೆ ಅಧ್ಯಯನ ಮಾಡಲು ಸಮಿತಿಯನ್ನು ರಚಿಸಲಾಗಿತ್ತು.

ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಕಲ್ಪಿಸುವ ಪ್ರಯತ್ನ 1975ರಿಂದಲೂ ನಡೆದಿದೆ. ಹರಿಯಾಣ ಸರ್ಕಾರವು ಪರಿಶಿಷ್ಟ ಜಾತಿಯಲ್ಲಿರುವ 'ಬಾಲ್ಮೀಕಿ' ಉಪಜಾತಿಗೆ ಒಳಮೀಸಲಾತಿಯನ್ನು ನೀಡಿತು. ಅದನ್ನು ಅನುಸರಿಸಿ ಪಂಜಾಬ್ ಸರ್ಕಾರ ಪರಿಶಿಷ್ಟ ಜಾತಿಯಲ್ಲಿರುವ 'ಮಜಬಿ' ಎನ್ನುವ ಉಪಜಾತಿಗೆ ಮೀಸಲಾತಿಯನ್ನು ನೀಡಿತು. ಇವುಗಳಿಂದ ಪ್ರೇರಣೆ ಪಡೆದ ಆಂಧ್ರಪ್ರದೇಶದ ಸರ್ಕಾರವು ಪರಿಶಿಷ್ಟ ಜಾತಿಯಲ್ಲಿರುವ ಉಪಜಾತಿಗಳಿಗೆ ಒಳಮಿಸಲಾತಿಯನ್ನು ನೀಡಿತು. ಅದರ ವಿರುದ್ಧ ಇ.ವಿ. ಚಿನ್ನಯ್ಯ ಎನ್ನುವವರು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋದರು. 2004–05 ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ ಹೆಗಡೆ ನೇತೃತ್ವದ ಸಾಂವಿಧಾನಿಕ ಪೀಠ ರಾಜ್ಯ ಸರ್ಕಾರಗಳಿಗೆ ಪರಿಶಿಷ್ಟ ಜಾತಿಗೆ ಒಳಮೀಸಲಾತಿಯನ್ನು ನೀಡುವ ಅಧಿಕಾರವಿಲ್ಲವೆಂದು ತೀರ್ಪು ನೀಡಿತ್ತು. ಇದರಿಂದಾಗಿ ಹರಿಯಾಣ, ಪಂಜಾಬ್‌ಗಳಿದ್ದ ಒಳಮೀಸಲಾತಿ ರದ್ದಾಯ್ತು. ಇದನ್ನು ಪ್ರಶ್ನಿಸಿ ಪಂಜಾಬ್ ಸರ್ಕಾರ ಸುಪ್ರೀಂ ಕೋರ್ಟಿನ ಮೊರೆ ಹೋಯಿತು. 2020ರಲ್ಲಿ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಗಳಿಗೆ ಒಳಮೀಸಲಾತಿ ಕಲ್ಪಿಸುವ ಅಧಿಕಾರವಿದೆಯೆಂದು ಅಭಿಪ್ರಾಯಪಟ್ಟಿತು. ಸುಪ್ರೀಂ ಕೋರ್ಟಿನ ಈ ಎರಡು ತೀರ್ಪುಗಳು ಐದು ಜನ ನ್ಯಾಯಮೂರ್ತಿಗಳನ್ನು ಒಳಗೊಂಡಿತ್ತು. ಅದರಿಂದಾಗಿ ಸುಪ್ರೀಂ ಕೋರ್ಟಿನ ಏಳು ಜನ ನ್ಯಾಯಮೂರ್ತಿಗಳನ್ನೊಳಗೊಂಡ ವಿಸ್ತೃತ ಪೀಠದಿಂದ ಅಂತಿಮ ತೀರ್ಪು ಮತ್ತೆ ಬರುವ ಅಗತ್ಯವಿತ್ತು.

### ಸುಪ್ರೀಂಕೋರ್ಟಿನ ಅಂತಿಮ ತೀರ್ಮಾನ:

ಈ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದಲ್ಲಿದ್ದ ಏಳು ಜನರ ನ್ಯಾಯಾಧೀಶರ ಪೀಠವು ಒಳಮಿಸಲಾತಿ ಕುರಿತಂತೆ ದಿನಾಂಕ 1.8.2024 ರಂದು ತನ್ನ ಐತಿಹಾಸಿಕ ತೀರ್ಪನ್ನು ನೀಡಿತು. ಈ ಪೀಠವು "ಪರಿಶಿಷ್ಟ ಜಾತಿಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಉಪಜಾತಿಗಳ ಅಭಿವೃದ್ಧಿಯ ಉದ್ದೇಶದಿಂದ ಆ ಜಾತಿಗಳಿಗೆ ಸೇರಿದವರಿಗೆ ಒಳ ಮೀಸಲಾತಿ ಕಲ್ಪಿಸುವ ಸಾಂವಿಧಾನಿಕ ಅಧಿಕಾರವು ರಾಜ್ಯ ಸರ್ಕಾರಗಳಿಗೆ ಇದೆ. ಆದರೆ ರಾಜ್ಯಗಳು ಒಳಮೀಸಲಾತಿಯನ್ನು ನೀಡುವಾಗ ಸಮರ್ಥನೀಯವಾದ ದತ್ತಾಂಶಗಳನ್ನು ಹೊಂದಿರಬೇಕೆ ಹೊರತು ತಮಗೆ ತೋಚಿದ ರೀತಿಯಲ್ಲಿ ಒಳಮಿಸಲಾತಿಯನ್ನು ನೀಡುವ ಹಾಗಿಲ್ಲ" ಎನ್ನುವ ತೀರ್ಪು ನೀಡಿತ್ತು.

ಸುಪ್ರೀಂಕೋರ್ಟ್ ಒಳಮೀಸಲಾತಿ ಕಲ್ಪಿಸಿದ್ದ ಸಾಂವಿಧಾನಿಕ ಪೀಠದಲ್ಲಿ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಸಹ ಒಬ್ಬ ನ್ಯಾಯಾಧೀಶರಾಗಿದ್ದರು. ಅವರು ತಮ್ಮ ತೀರ್ಪಿನಲ್ಲಿ "ಸರ್ಕಾರಿ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯ ಸಿಗದ ಹಿಂದುಳಿದ ಉಪಜಾತಿಗಳಿಗೆ ಆದ್ಯತೆ ನೀಡುವುದು ರಾಜ್ಯ ಸರ್ಕಾರದ ಕರ್ತವ್ಯವಾಗಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಕೆನೆಪದರವನ್ನು ಗುರುತಿಸಲು ರಾಜ್ಯ ಸರ್ಕಾರಗಳು ವಿಶೇಷ ನೀತಿಯನ್ನು ರೂಪಿಸಬೇಕು. ಇದರಿಂದಾಗಿ ಸಂವಿಧಾನದಲ್ಲಿ ಹೇಳಿರುವ ನಿಜವಾದ ಸಮಾನತೆಯ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ" ಎಂದು ದಾಖಲು ಮಾಡಿದ್ದಾರೆ. ನ್ಯಾಯಮೂರ್ತಿ ಗವಾಯಿ ಅವರ ಜೊತೆ ಸಹಮತವನ್ನು ವ್ಯಕ್ತಪಡಿಸಿರುವ ನ್ಯಾಯಮೂರ್ತಿ ವಿಕ್ರಮನಾಥ್ ಅವರು ಹೀಗೆ ಬರೆದಿದ್ದಾರೆ. "ಕೆನೆ ಪದರವನ್ನು ಗುರುತಿಸಲು ಬಳಸುವ ಮಾನದಂಡಗಳು, ಒ.ಬಿ.ಸಿ. ವರ್ಗಗಳ ಮಾನದಂಡಕ್ಕಿಂತ ಭಿನ್ನವಾಗಿರಬೇಕು. ಮೀಸಲಾತಿ ಪ್ರಯೋಜನ ಪಡೆದು ವ್ಯಕ್ತಿಯೊಬ್ಬ ಜವಾನ ಅಥವಾ ಸಣ್ಣ ಹುದ್ದೆಗೆ ಸೇರಿದ್ದರೆ ಆತನನ್ನು ಹಿಂದುಳಿದವನೆಂದೂ ಪರಿಭಾವಿಸಬೇಕು. ಮೀಸಲಾತಿಯಿಂದ ಉನ್ನತ ದರ್ಜೆ ಪಡೆದರೆ ಆತನನ್ನು ಹಿಂದುಳಿದವನೆಂದು ಗುರುತಿಸಲು ಸಾಧ್ಯವಾಗುವುದಿಲ್ಲ".

### ಕರ್ನಾಟಕ ಸರ್ಕಾರದಿಂದ ಆಯೋಗ ರಚನೆ

ಕಳೆದ ವರ್ಷ ಆಗಸ್ಟ್‌ನಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಅನ್ವಯ ಕರ್ನಾಟಕ ಸರ್ಕಾರವು ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿಗೆ ಒಳಮಿಸಲಾತಿ ಕಲ್ಪಿಸುವ ಉದ್ದೇಶದಿಂದ ಆಯೋಗವನ್ನು ರಚಿಸಿತು. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಸರ್ವೋಚ್ಚ ನ್ಯಾಯಾಲಯದ ಮಾರ್ಗದರ್ಶನದ ಅಡಿಯಲ್ಲಿಯೇ ಕಾರ್ಯ ನಿರ್ವಹಿಸಿದ್ದಾರೆ. ಪ್ರತಿಯೊಂದು ಅಂಶವನ್ನೂ ಆಯೋಗವು ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನಕ್ಕೆ ಬಂದಿದೆ.

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಅನಂತರ ಮಾಧ್ಯಮದ ಜೊತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಅದನ್ನು ಉಲ್ಲೇಖಿಸುವ ಅಗತ್ಯವಿದೆ. "ಪರಿಶಿಷ್ಟ ಜಾತಿಯಲ್ಲಿ ಈಗಾಗಲೇ ಸೌಲಭ್ಯ ಪಡೆದಿರುವವರು ಯಾವುದೇ ಸೌಲಭ್ಯ ಪಡೆಯದ ತಮ್ಮ ಸೋದರರ ಬಗೆಗೆ ಸಹಾನುಭೂತಿ ಹೊಂದಿರಬೇಕು. ಅದಕ್ಕಾಗಿ ಅವರುಗಳು ಸ್ವಲ್ಪ ತ್ಯಾಗವನ್ನು ಮಾಡುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು".

ಸ್ವಾತಂತ್ರ್ಯ ಬಂದು 78 ವರ್ಷಗಳಾದರೂ ಯಾವುದೇ ಸೌಲಭ್ಯ ಪಡೆಯದ ಅನೇಕ ಉಪಜಾತಿಗಳು ಪರಿಶಿಷ್ಟ ವರ್ಗದಲ್ಲಿವೆ ಎಂದು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಅವುಗಳ ಬಗ್ಗೆ ಕೆಲವನ್ನು ನೋಡಬಹುದು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಪರಿಶಿಷ್ಟ ಜಾತಿಯಲ್ಲಿರುವ ಸಾಕ್ಷರತೆಯನ್ನು ಕುರಿತು ಪ್ರಸ್ತಾಪಿಸುತ್ತಾರೆ ಕರ್ನಾಟಕ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯಲ್ಲಿ ಶೇಕಡ 86.54 ಟ್ರಸ್ಟ್ ಜನ ಸಾಕ್ಷರರಾಗಿದ್ದಾರೆ. 2011ರ ಜನಗಣತಿಯನ್ನು ಆಧರಿಸಿ ಹೇಳುವುದಾದರೆ ಪರಿಶಿಷ್ಟ ಜಾತಿಯಲ್ಲಿ ಶೇಕಡ 80ರಷ್ಟು ಅಕ್ಷರಸ್ಥರಿದ್ದಾರೆ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಪ್ರಕಾರ ಅತ್ಯಂತ ಹಿಂದುಳಿದ ಪರಿಶಿಷ್ಟ ಜಾತಿಯಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡ 40ಕ್ಕಿಂತ ಕಡಿಮೆ ಇದೆ. ಈ ಸಮುದಾಯದಲ್ಲಿ ತಾಂತ್ರಿಕ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಪಡೆದವರು ಅತ್ಯಲ್ಪ ಪ್ರಮಾಣದಲ್ಲಿ ಕಾಣಬರುತ್ತಾರೆ. ಪರಿಶಿಷ್ಟ ಜಾತಿಯಲ್ಲಿ ಇರುವ 101 ಜಾತಿಗಳಲ್ಲಿ 25 ಜಾತಿಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆದವರು ಒಬ್ಬರೂ ಇಲ್ಲ. ಅದೇ ರೀತಿ 14 ಪರಿಶಿಷ್ಟ ಉಪಜಾತಿಗಳಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಒಬ್ಬರೂ ಇಲ್ಲ. ಪರಿಶಿಷ್ಟ ಜಾತಿಯ 40 ಉಪಜಾತಿಗಳಲ್ಲಿ ಒಬ್ಬರೇ ಒಬ್ಬರೂ ಎಂ.ಬಿ.ಬಿ.ಎಸ್. ಪದವಿ ಪಡೆದಿಲ್ಲ. ಹಾಗೆಯೇ ಪರಿಶಿಷ್ಟ ಜಾತಿಯ 14 ಉಪಜಾತಿಗಳಲ್ಲಿ ಇಂಜಿನಿಯರಿಂಗ್ ಪಡೆದವರು ಒಬ್ಬರೂ ಇಲ್ಲ. ಬಂಜಾರ, ಭೋವಿ, ಹೊಲೆಯ, ಮಾದಿಗ ಮೊದಲಾದ ಹತ್ತು ಸಮುದಾಯಗಳು ಶಿಕ್ಷಣದ ಗರಿಷ್ಠ ಸೌಲಭ್ಯವನ್ನು ಪಡೆದಿದ್ದಾರೆ. ಸರ್ಕಾರಿ ಸವಲತ್ತು ಮತ್ತು ವಿದ್ಯಾರ್ಥಿನಿಲಯದ ಪ್ರಯೋಜನಗಳನ್ನೂ ಇವರು ಪಡೆದಿವೆ.

ರಾಜ್ಯದಲ್ಲಿ 11.76 ಲಕ್ಷ ಸರ್ಕಾರಿ ಹುದ್ದೆಗಳಿವೆ. ಅದರಲ್ಲಿ 7.31 ಲಕ್ಷ ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಇನ್ನು 4 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿಯಿವೆ. ಸರ್ಕಾರದಲ್ಲಿ 1.99 ಲಕ್ಷ ಪರಿಶಿಷ್ಟ ಜಾತಿಯವರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಪುರುಷರ ಸಂಖ್ಯೆ ಸ್ತ್ರೀಯರ ಸಂಖ್ಯೆಗಿಂತ ಎರಡು ಪಟ್ಟು ಹೆಚ್ಚಿದೆ. ಇಲ್ಲಿ ದೊಡ್ಡ ಪ್ರಮಾಣದಲ್ಲಿ ಲಿಂಗ ಅಸಮಾನತೆಯನ್ನು ಕಾಣಬಹುದು. ಪರಿಶಿಷ್ಟ ಜಾತಿಯವರಿಗೆ ಸಿ ಮತ್ತು ಡಿ ಹುದ್ದೆಗಳಲ್ಲಿ ಶೇಕಡ 15ರಷ್ಟು ಮೀಸಲಾತಿ ದೊರಕಿದೆ. ಎ ಮತ್ತು ಬಿ ದರ್ಜೆಯ ಹುದ್ದೆಗಳಲ್ಲಿ ಅವರ ಜನಸಂಖ್ಯೆಗೆ ಅನುಗುಣವಾದ ಮಟ್ಟದಲ್ಲಿ ಮೀಸಲಾತಿ ದೊರಕಿಲ್ಲ. ಪರಿಶಿಷ್ಟ ಜಾತಿಯಲ್ಲಿ ಇರುವ 12 ಉಪಜಾತಿಗಳಿಗೆ ಅಂದರೆ ಚಾಂಡಾಲ ಗಾರೋಡಾ, ಕೋಲುಪುಕುವಂದ್ಲು, ಕ್ಯಾಂಪ್‌ಮದೀಸ್, ಮವಿಲನ್, ಮಾಲಜಂಗಮ, ಮಾರುವಂಕರ್, ಮಹಾವಂಶಿಧೇಡಾ, ವಂಕರ್, ಮನ್ನೆ, ಮಸ್ತಿ, ಪಿಂದೊಳ್ಳಿ ಮೊದಲಾದ ಉಪಜಾತಿಯವರಿಗೆ ಒಂದೇ ಒಂದು ಸರ್ಕಾರಿ ಹುದ್ದೆಯೂ ದೊರಕಿಲ್ಲ. ಇದಕ್ಕೆ ಅವರಿಗೆ ಸೂಕ್ತವಾದ ಶೈಕ್ಷಣಿಕ ಅರ್ಹತೆ ಇಲ್ಲದಿರುವುದು ಕಾರಣವಾಗಿದೆ. ಅಂದರೆ ಪರಿಶಿಷ್ಟ ಜಾತಿಯ ಉಪಜಾತಿಗಳಿಗೆ ಸೂಕ್ತವಾದ ಶೈಕ್ಷಣಿಕ ಅರ್ಹತೆಯನ್ನು ಕಲ್ಪಿಸುವತ್ತ ಸರ್ಕಾರ ಪ್ರಯತ್ನಿಸಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಸ್ವಂತ ಮನೆ ಪಡೆದವರ ಪ್ರಮಾಣ ಶೇಕಡ 79.10ರಷ್ಟಿದೆ. ಶೇಕಡ 18.69ರಷ್ಟು ಜನರಿಗೆ ಮನೆ ಇಲ್ಲ. ಶಿಳ್ಳೆಖ್ಯಾತ, ಸುಡುಗಾಡು ಸಿದ್ಧರು, ಮಾಲ, ಚೆನ್ನದಾಸಿರಿ ಮೊದಲಾದ ಉಪಜಾತಿ ಜನರಿಗೆ ಮನೆ ದೊರಕಿಲ್ಲ. ಬೆಂಗಳೂರು ಮಹಾನಗರದಲ್ಲಿ ಪರಿಶಿಷ್ಟ ಜಾತಿಯ ಶೇಕಡ 60ರಷ್ಟು ಜನರು ಕೊಳಚೆ ಪ್ರದೇಶಗಳಲ್ಲಿ ವಾಸವಾಗಿದ್ದಾರೆ.

ಭಾರತದ ಸಂವಿಧಾನದ ಪ್ರಕಾರ ಪರಿಶಿಷ್ಟ ಜಾತಿಯ ಜನರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ದೊರಕಿದೆ. ಆದರೆ ಪರಿಶಿಷ್ಟ ಜಾತಿಯಲ್ಲಿರುವ ಉಪಜಾತಿಗಳಿಗೆ ಈ ಸೌಲಭ್ಯ ದೊರಕಿದೆಯೇ ಎಂದರೆ ಸಮಾಧಾನಕರವಾದ ಉತ್ತರವಿಲ್ಲ. ಪರಿಶಿಷ್ಟ ಜಾತಿಯಲ್ಲಿರುವ ಸ್ಪರ್ಶ ಜನಾಂಗಕ್ಕೆ ಹೆಚ್ಚಿನ ಪ್ರಾತಿನಿಧ್ಯ ದೊರಕಿದೆ. ಅದಕ್ಕೆ ರಾಜಕೀಯ ಕಾರಣಗಳಿವೆ. ಈ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮಾತುಗಳು ನೆನಪಿಗೆ ಬರುತ್ತವೆ. 'ಪುಣೆ ಒಪ್ಪಂದ' ಸಹ ಹಲವು ರೀತಿಯ ಮಹತ್ತ್ವವನ್ನು ಪಡೆಯುತ್ತದೆ.

ಪರಿಶಿಷ್ಟ ಜಾತಿಯಲ್ಲಿರುವ 101 ಪಂಗಡಗಳಲ್ಲಿ 41 ಉಪಜಾತಿಗಳಿಗೆ ರಾಜಕೀಯವಾಗಿ ಪ್ರಾತಿನಿಧ್ಯವಿಲ್ಲವೆಂದು ಹೇಳಲಾಗುತ್ತಿದೆ. ಪ್ರಸ್ತುತ 21,917 ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಅದರಲ್ಲಿ ಬಲಗೈ ಸಮುದಾಯದ ಹೊಲೆಯರು ಮೊದಲನೆಯ ಸ್ಥಾನದಲ್ಲಿದ್ದಾರೆ. ಎರಡನೆಯ ಸ್ಥಾನದಲ್ಲಿ ಎಡಗೈ ಸಮುದಾಯದ ಮಾದಿಗ ಜಾತಿಯವರಿದ್ದಾರೆ. ಮೂರನೆಯ ಸ್ಥಾನಕ್ಕೆ ಬಂಜಾರ ಸಮುದಾಯ ಬರುತ್ತದೆ. ನಾಲ್ಕನೆಯ ಸ್ಥಾನವು ಆದಿ ಕರ್ನಾಟಕ ಮತ್ತು ಐದನೆಯ ಸ್ಥಾನವು ಭೋವಿ ಸಮುದಾಯಕ್ಕೆ ದೊರಕಿವೆ.

ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ 52 ಪರಿಶಿಷ್ಟ ಜಾತಿಯ ಜನ ಸದಸ್ಯರಿದ್ದು, ಅದರಲ್ಲಿ 12 ಉಪಜಾತಿಗಳಿಗೆ ಮಾತ್ರ ಪ್ರಾತಿನಿಧ್ಯ ದೊರಕಿದೆ. ಇನ್ನುಳಿದ 82 ನಗರ ಸಭೆಗಳಲ್ಲಿ ಪ್ರಾತಿನಿಧ್ಯ ದೊರಕಿರುವುದಿಲ್ಲ. ಒಟ್ಟಾರೆ ಸ್ಥಳೀಯ ಸಂಸ್ಥೆಗಳಲ್ಲಿ 101 ಪರಿಶಿಷ್ಟ ಜಾತಿಗಳಲ್ಲಿ 60 ಉಪಜಾತಿಗಳಿಗೆ ಮಾತ್ರ ಪ್ರಾತಿನಿಧ್ಯ ದೊರಕಿದೆ. ಇನ್ನು 41 ಉಪಜಾತಿಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಲ್ಲ. ಇವರಿಗೆ ರಾಜಕೀಯ ಪ್ರಾತಿನಿಧ್ಯ ದೊರೆಯದಿರಲು ಮುಖ್ಯ ಕಾರಣ ಇವರ ಬಡತನ, ಅನಕ್ಷರತೆ, ಜನಸಂಖ್ಯೆ ಕಡಮೆ ಇರುವುದು ಹಾಗೂ ಆ ಉಪ ಸಮುದಾಯಗಳ ದುರ್ಬಲ ಸಂಘಟನೆ.

### ಆಯೋಗದ ಶಿಫಾರಸ್ಸು:

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಇಂತಹ ಅನೇಕ ಅಂಕಿಅಂಶಗಳ ಆಧಾರದ ಮೇಲೆ ಪರಿಶಿಷ್ಟ ಜಾತಿಯಲ್ಲಿರುವ

## ಸಚಿವ ಸಂಪುಟದ ತೀರ್ಮಾನ

**ಒಳಮೀಸಲಾತಿ ಕುರಿತಂತೆ ದಿನಾಂಕ.19.8–2025ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಕಾರಾತ್ಮಕ ತೀರ್ಮಾನ ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿಯಲ್ಲಿರುವ 101 ಸಮುದಾಯವನ್ನು ಪ್ರವರ್ಗ 'ಎ' ಪ್ರವರ್ಗ 'ಬಿ' ಮತ್ತು ಪ್ರವರ್ಗ'ಸಿ' ಎಂದು ವಿಂಗಡಿಸಲಾಗಿದೆ. ಪ್ರವರ್ಗ 'ಎ'ನಲ್ಲಿ ಪರಿಶಿಷ್ಟ ವರ್ಗದ ಬಲಗೈ ಸಂಬಂಧಿತ ಉಪಜಾತಿಗಳಿದ್ದು, ಅವುಗಳಿಗೆ ಶೇಕಡ 6ರಷ್ಟು ಮೀಸಲಾತಿ ಕೊಡಲಾಗಿದೆ. ಪ್ರವರ್ಗ ಬಿ ನಲ್ಲಿ ಎಡಗೈ ಸಂಬಂಧಿತ ಉಪಜಾತಿಗಳಿದ್ದು ಅವುಗಳಿಗೆ ಶೇಕಡ 6ರಷ್ಟು ಮೀಸಲಾತಿ ನೀಡಲಾಗಿದೆ. ಪ್ರವರ್ಗ ಸಿನಲ್ಲಿ ಸ್ಪರ್ಶ, ಅಲೆಮಾರಿ ಉಪಜಾತಿಗಳಿದ್ದು ಅಂದರೆ ಕೊರಚ, ಕೊರಮ, ಭೋವಿ ಹಾಗೂ ಲಂಬಾಣಿ ಸಮುದಾಯಗಳನ್ನು ಸೇರಿಸಿ ಅವರಿಗೆ ಶೇಕಡ 5ರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಒಟ್ಟು ಶೇಕಡ 17ರಷ್ಟು ಮೀಸಲಾತಿಯನ್ನು ಪರಿಶಿಷ್ಟವರ್ಗಕ್ಕೆ ಸಚಿವ ಸಂಪುಟ ನೀಡಿದೆ. ಜೊತೆಗೆ ಸಚಿವ ಸಂಪುಟ 'ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗ'ವನ್ನು ರಚಿಸಲು ತೀರ್ಮಾನಿಸಿದೆ. ಇದೊಂದು ಒಳ್ಳೆಯ ಬೆಳವಣಿಗೆ. ಈ ಮೀಸಲಾತಿಯಲ್ಲಿ ಏನಾದರೂ ಬದಲಾವಣೆ ಮಾಡಬೇಕಾದರೆ ಈ ಆಯೋಗವನ್ನು ಕೇಳಿ, ಅದರ ಸಲಹೆಯ ಅನುಸಾರ ನಡೆಯಬಹುದು.**

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

ಉಪಜಾತಿಗಳಿಗೆ ಮೀಸಲಾತಿ ಪ್ರಮಾಣವನ್ನು ನಿಗದಿ ಮಾಡಿರುತ್ತಾರೆ. ಒಟ್ಟಾರೆ ಪರಿಶಿಷ್ಟ ಜಾತಿಯನ್ನು ಐದು ವಿಭಾಗಗಳಾಗಿ ವಿಂಗಡಿಸಿ, ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಕಲ್ಪಿಸಿರುತ್ತಾರೆ.

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗ ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸಲಹೆಯನ್ನು ನೀಡಿದೆ. ಈಗಾಗಲೇ 1994ರ ಇಂದ್ರಸಾಹ್ನಿ ಪ್ರಕರಣದಲ್ಲಿ ಮೀಸಲಾತಿ ಪ್ರಮಾಣವನ್ನು ಶೇಕಡ 50ಕ್ಕಿಂತ ಹೆಚ್ಚಿಗೆ ಮಾಡುವಂತಿಲ್ಲವೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಅದರಿಂದಾಗಿ ರಾಜ್ಯ ಸರ್ಕಾರ ನಾಗಮೋಹನ್‌ದಾಸ್ ಅವರ ವರದಿಯನ್ನು ಯಥಾವತ್ತಾಗಿ ಅನುಷ್ಠಾನ ಮಾಡಲು ಸಾಧ್ಯವಾಗುವುದಿಲ್ಲ. ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಪ್ರಮಾಣವನ್ನು ಅವರ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸಲು ಭಾರತ ಸರ್ಕಾರಕ್ಕೆ ಅಧಿಕಾರವಿದೆ.

ಪ್ರವರ್ಗ 'ಎ'ಯಲ್ಲಿ ಅತಿ ಹಿಂದುಳಿದ ಮತ್ತು ಜನಸಂಖ್ಯಾ ಬಾಹುಳ್ಯವಿಲ್ಲದ ಸಮುದಾಯಗಳಿವೆ. ಬೇಡ ಜಂಗಮ ಎನ್ನುವ ಸಮುದಾಯವನ್ನು ಇಲ್ಲಿ ಸೇರಿಸಿರುವ ಕಾರಣ ಮುಂದಿನ ದಿನಗಳಲ್ಲಿ ಧ್ವನಿ ಇಲ್ಲದ ಅನೇಕ ಸಮುದಾಯಗಳಿಗೆ ಅನ್ಯಾಯವಾದರೆ ಆಶ್ಚರ್ಯವಿಲ್ಲ. ಎಡಗೈ ಸಮುದಾಯಕ್ಕೆ ಪ್ರವರ್ಗ 'ಬಿ'ಯಲ್ಲಿ ಮತ್ತು ಬಲಗೈ ಸಮುದಾಯಕ್ಕೆ ಪ್ರವರ್ಗ 'ಸಿ'ಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಪರಿಶಿಷ್ಟ ಜಾತಿಯಲ್ಲಿರುವ ಸ್ಪರ್ಶ ಉಪಜಾತಿಗಳಾದ ಬಂಜಾರ, ಭೋವಿ, ಕೊರಚ, ಕೊರಮ ಜಾತಿಗಳಿಗೆ ಪ್ರವರ್ಗ 'ಡಿ'ಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರವರ್ಗ 'ಇ'ಯಲ್ಲಿ ಆದಿಕರ್ನಾಟಕ, ಆದಿದ್ರಾವಿಡ ಮತ್ತು ಆದಿ ಆಂಧ್ರ ಉಪಜಾತಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

**ಆಯೋಗದ ವರದಿಗೆ ಅಸಮಾಧಾನ:**

ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ಅನುಷ್ಠಾನಕ್ಕೆ ಬಲಗೈ ಹಾಗೂ ಬಂಜಾರ ಮತ್ತು ಭೋವಿ ಸಮುದಾಯದವರು ವಿರೋಧ ವ್ಯಕ್ತಪಡಿಸಿದ್ದಾರೆ. ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯರಾದ ದಾಸಯ್ಯ ಮತ್ತು ಕರ್ನಾಟಕದ ನಿವೃತ್ತ ಹಿರಿಯ ಐ.ಎ.ಎಸ್. ಅಧಿಕಾರಿ ಸಿದ್ದಯ್ಯ ಅವರುಗಳು "ನಾಗಮೋಹನ್‌ದಾಸ್ ಅವರ ಆಯೋಗ ಬಲಗೈ ಸಮುದಾಯವನ್ನು ಜನಸಂಖ್ಯೆಯಲ್ಲಿ ಕಡಿಮೆ ಎಂದು ಪೂರ್ವನಿರ್ಧಾರಿತವಾಗಿ ತನ್ನ ಕೆಲಸವನ್ನು ಪ್ರಾರಂಭಿಸಿದೆ ಮತ್ತು ಈ ಸಮುದಾಯದ ಚಲವಾದಿ ಮತ್ತು ಆದಿ ಕರ್ನಾಟಕ ಪಂಗಡವನ್ನು ಬೇರೆ ಗುಂಪಾಗಿಸಿದೆ. ಇದರಿಂದಾಗಿ ಬಲಗೈ ಸಮುದಾಯಕ್ಕೆ ಮೀಸಲಾತಿಯ ಪ್ರಮಾಣ ಕಡಿಮೆಯಾಗಿದೆ ಹಾಗೂ ಈ ಸಮುದಾಯವನ್ನು ಛಿದ್ರಗೊಳಿಸುವ ಉದ್ದೇಶವನ್ನು ಸಹ ಹೊಂದಿದೆ" ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಬಂಜಾರ ಮತ್ತು ಭೋವಿ ಸಮುದಾಯದ ನಾಯಕರು ಸಹ ತಮ್ಮ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಬರೆದಿರುವ ಮಾತುಗಳನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. "ಪರಿಶಿಷ್ಟ ಜಾತಿಯವರು ಬರೀ ಅಲ್ಪಸಂಖ್ಯಾತರಲ್ಲ, ಬೇರೆ ಎಲ್ಲ ನಾಗರಿಕರು ಸಂವಿಧಾನಾತ್ಮಕವಾಗಿ ಪಡೆಯುವ ರಕ್ಷಣೆಗಿಂತ ಹೆಚ್ಚಿನ ರಕ್ಷಣೆ ಪಡೆಯಲು ಅರ್ಹರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅವರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿ ಇತರರಿಗಿಂತ ಹೀನಸ್ಥಿತಿಯಲ್ಲಿದೆ. ಇದರಿಂದಾಗಿ ಅವರ ಮೇಲೆ ನಡೆಯುವ ದಬ್ಬಾಳಿಕೆ ಹಾಗೂ ತಾರತಮ್ಯದ ವಿರುದ್ಧ ಅವರಿಗೆ ರಕ್ಷಣೆ ನೀಡುವ ಅಗತ್ಯವಿದೆ".

ಪರಿಶಿಷ್ಟ ಜಾತಿಯ ಸಂಘಟನೆ ಜನಸಂಖ್ಯೆಗೆ ಅನುಗುಣವಾದ ಮೀಸಲಾತಿ ಪಡೆಯಲು ಹಾಗೂ ಸರ್ಕಾರದಲ್ಲಿ ಖಾಲಿ ಇರುವ ನಾಲ್ಕು ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲು ಬಹುದೊಡ್ಡ ಹೋರಾಟವನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳುವ ಅಗತ್ಯವಿದೆ.

▪ **ನಿರೂಪಣೆ: ಶ್ರೀವತ್ಸ**

# ಪಿಎಂ ಮೋದಿ ಗಡ್ಡದ ಹಿಂದಿನ ರಹಸ್ಯ!




ದೇಶದ ಪ್ರಧಾನಿ ನರೇಂದ್ರ ಮೋದಿ ಯಾವಾಗಲೂ ಗಡ್ಡದಾರಿಯಾಗಿರುತ್ತಾರೆ ಏಕೆ? ಇದರ ಹಿಂದಿನ ಕಾರಣ, ರಹಸ್ಯ ಏನಿರಬಹುದು ಎಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಪ್ರಧಾನಿ ಗಡ್ಡಕ್ಕೂ ರಾಮಕೃಷ್ಣಾಶ್ರಮಕ್ಕೂ ನಿಕಟ ಸಂಬಂಧವಿದೆ. ಎಂದರೆ ನಿಮಗೆ ಮತ್ತೆ ಅಚ್ಚರಿ ಎನಿಸಬಹುದು.! ಆದರೂ ಇದು ಸತ್ಯ. ನರೇಂದ್ರ ಮೋದಿಯವರು 6, 7 ಮತ್ತು 8 ನೇ ತರಗತಿಯನ್ನು ಗುಜರಾತಿನ ರಾಜ್‌ಕೋಟ್ ರಾಮಕೃಷ್ಣಾಶ್ರಮದಲ್ಲಿ ಓದಿದ್ದಾರೆ. ಆಗ ಪೂಜ್ಯಶ್ರೀ ಆತ್ಮಸ್ಥಾನಾನಂದಸ್ವಾಮೀಜಿ ಅವರು ಆಶ್ರಮದ ಅಧ್ಯಕ್ಷರಾಗಿದ್ದರು. ಶ್ರೀನರೇಂದ್ರ ಮೋದಿ ಅವರು ಅಲ್ಲಿ ಅನೇಕ ರೀತಿಯ ಸೇವಾಕಾರ್ಯಗಳನ್ನು ಮಾಡಿದ್ದಾರೆ, ದೇವರ ಗರ್ಭಗುಡಿಯನ್ನು ಶುಚಿ ಮಾಡಿಕೊಟ್ಟು, ಪೂಜಾ ಕೈಂಕರ್ಯಗಳಿಗೆ ಸಹಾಯ ಮಾಡುವುದು, ಸ್ವಾಮಿಗಳ ವಸ್ತ್ರವನ್ನು ಶುಚಿ ಮಾಡುವುದು ಮೊದಲಾದ ಕೆಲಸಗಳನ್ನು ಮಾಡಿದ್ದಾರೆ. ಅಷ್ಟೇಅಲ್ಲ ಒಂದು ವರ್ಷ ಕಲ್ಕತ್ತದ ಬೇಲೂರು ಮಠದಲ್ಲೂ ಇಂತಹುದೇ ಸೇವಾಕಾರ್ಯವನ್ನು ಮಾಡಿದ್ದಾರೆ. 18ನೇ ವಯಸ್ಸಿಗೆ ಬಂದಾಗ ಮಾನ್ಯ ನರೇಂದ್ರ ಮೋದಿ ಅವರು 'ನಾನು ಸನ್ಯಾಸಿಯಾಗಿ ಆಶ್ರಮಕ್ಕೆ ಸೇರಿಕೊಳ್ಳುತ್ತೇನೆ' ಎಂದು ಸ್ವಾಮೀಜಿಯವರಲ್ಲಿ ವಿನಂತಿ ಮಾಡಿಕೊಂಡರು. ಆಗ ಸ್ವಾಮೀಜಿ ಅವರು "ಆಗ ಸ್ವಾಮೀಜಿ ನೀನು ಸನ್ಯಾಸ ಆಶ್ರಮಕ್ಕೆ ಬರುವುದು ಬೇಡ. ಸಮಾಜ ಸೇವೆ ಮಾಡು, ಆದರೆ ಯಾವುದೇ ಕಾರಣಕ್ಕೂ ಗಡ್ಡ ತೆಗೆಯಬೇಡ. ನನಗೆ ಮಾತು ಕೊಡು. ನಿನಗೆ ಒಳ್ಳೆಯ ವರ್ಚಸ್ಸು ಇದೆ. ದೇಶ ಸೇವೆ ಮಾಡುವಂತಹ ವಿಶಾಲ ಮನಸ್ಸಿದೆ." ಎಂದು ಹೇಳಿದ್ದರು.

ಈ ವಿಚಾರವನ್ನು ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಮೊದಲನೇ ವರ್ಷದ ಡಿಪ್ಲೋಮೋ ತರಗತಿಗೆ ಚಾಲನೆ ನೀಡಿ ಮಾತನಾಡಿದ ತುಮಕೂರಿನ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ಪೂಜ್ಯಶ್ರೀ ವೀರೇಶಾನಂದಸರಸ್ವತಿ ಸ್ವಾಮೀಜಿ ಅವರು ವಿದ್ಯಾರ್ಥಿಗಳಿಂದ ತುಂಬಿದ ಸಭೆಯಲ್ಲೇ ಇದನ್ನು ಬಹಿರಂಗಪಡಿಸಿದರು. ರಾಜ್‌ಕೋಟ್ ರಾಮಕೃಷ್ಣ ಆಶ್ರಮದ ಸ್ವಾಮೀಜಿ ಅವರ ಆಶಯದಂತೆ ಮಾನ್ಯ ನರೇಂದ್ರಮೋದಿ ಅವರು ಕಳೆದ 11 ವರ್ಷಗಳಿಂದ ದೇಶದ ಪ್ರಧಾನಿಯಾಗಿದ್ದಾರೆ. ಪ್ರಧಾನಮಂತ್ರಿಗಳ ಗಡ್ಡದ ಹಿಂದಿನ ರಹಸ್ಯ ಕಥೆಯಿದು. ಮೋದಿಯವರು ಯಾವುದೇ ಊರಿಗೆ ಹೋಗಲಿ, ಅಲ್ಲಿ ರಾಮಕೃಷ್ಣ ಮಠವಿದೆ ಎನ್ನುವ ವಿಚಾರ ಕಿವಿಗೆ ಬಿದ್ದರೆ ಹೇಗಾದರೂ ಬಿಡುವು ಮಾಡಿಕೊಂಡು ಮಠಕ್ಕೆ ಹೋಗಿ ಶ್ರೀರಾಮಕೃಷ್ಣಪರಮಹಂಸರಿಗೆ ನಮಸ್ಕಾರ ಮಾಡಿ ಬರುವ ಅಭ್ಯಾಸ ಇಟ್ಟುಕೊಂಡಿದ್ದಾರೆ. ಅವರು ನಮ್ಮ ದೇಶದಲ್ಲೇ ಅಥವಾ ವಿದೇಶಕ್ಕೆ ಹೋದಾಗಲೂ ಇದೇ ಪದ್ಧತಿಯನ್ನು ಅನುಸರಿಸುತ್ತಾರೆ. ಒಟ್ಟಾರೆ ಶ್ರೀರಾಮಕೃಷ್ಣ ಆಶ್ರಮಕ್ಕೂ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಅವಿನಾಭಾವ ಸಂಬಂಧವಿದೆ.

> **"ವೃತ್ತಿಪರ ಕೋರ್ಸ್‌ಗಳಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಮಹತ್ವವಿದೆ. ಕಾಲೇಜು ದಿನಗಳಲ್ಲಿ ಉತ್ತಮ ಕೌಶಲ್ಯ ಬೆಳೆಸಿಕೊಂಡರೆ ಉದ್ಯೋಗಾವಕಾಶಗಳು ತಾವಾಗಿಯೇ ಅರಸಿ ಬರುತ್ತವೆ. ಮೇಲಾಗಿ ಸ್ವಾಮೀಜಿ ಹೇಳಿದ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಉತ್ತಮ ನಾಗರಿಕ ಪ್ರಜೆಯಾಗಬಹುದು. ಸಮಾಜ ಗೌರವಿಸುವಂತಹ ಅದರಣೀಯ ವ್ಯಕ್ತಿಯಾಗಬಹುದು. ಹೆತ್ತವರಿಗೂ, ವಿದ್ಯಾಸಂಸ್ಥೆಗೂ ಕೀರ್ತಿ ತರಬಹುದು"**
> – ಡಾ. ಹುಲಿನಾಯ್ಕರ್
>
> **"ನಿಮ್ಮ ಭವಿಷ್ಯ ನಿಮ್ಮ ಪರಿಶ್ರಮದ ಮೇಲೆ ಅವಲಂಬಿತವಾಗಿದೆ. ಕಾಲೇಜಿನಲ್ಲಿ ಉತ್ತಮ ಬೋಧಕ ಸಿಬ್ಬಂದಿ ಇದ್ದಾರೆ ಎಲ್ಲ ಮೂಲಸೌಲಭ್ಯ ಒದಗಿಸಲಾಗಿದೆ. ಆದರೆ ತಂತ್ರಜ್ಞಾನಕ್ಕೆ ದಾಸರಾಗಿ ಹೆಚ್ಚು ಸಮಯ ಪೋಲು ಮಾಡದೆ ನಿಮ್ಮ ಗುರಿ ತಲುಪುವ ಕಡೆಗೆ ಗಮನಕೊಟ್ಟರೆ ಮುಂದೆ ಬರುತ್ತೀರಿ. ಮತ್ತು ನಿಮ್ಮಿಂದ ಶಿಕ್ಷಣ ನೀಡಿದ ಸಂಸ್ಥೆಗೂ ಉತ್ತಮ ಹೆಸರು ಬರುತ್ತದೆ. ಹೀಗಾಗಿ ಪಾಠ, ಪ್ರವಚನದ ಕಡೆಗೆ ವಿಶೇಷ ಆಸಕ್ತಿಯಿರಬೇಕು. ವಿಶೇಷವಾಗಿ ಕಲಿಕೆ ಬಗ್ಗೆ ವಿಪರೀತ ಹಸಿವು ಇರಬೇಕು".**
> – ಡಾ. ರಮಣ್ ಹುಲಿನಾಯ್ಕರ್

ರಾಜ್‌ಕೋಟ್ ರಾಮಕೃಷ್ಣ ಆಶ್ರಮದ ಸ್ವಾಮೀಜಿಗೆ ಕೊಟ್ಟ ಮಾತಿನಂತೆ ಇಂದಿಗೂ ನಮ್ಮ ಪ್ರಧಾನಿಗಳು ಗಡ್ಡದಾರಿಯಾಗಿದ್ದಾರೆ, ಅಷ್ಟೇಅಲ್ಲ ಅಂದು ಸ್ವಾಮೀಜಿಗೆ ಕೊಟ್ಟ ಮಾತನ್ನು ಇಂದಿಗೂ ಸಹ ಉಳಿಸಿಕೊಂಡು ಬರುತ್ತಿದ್ದಾರೆ.

**ಅನ್ವೇಷಣಾ ಮನೋಭಾವ ವಿದ್ಯಾರ್ಥಿಗಳ ಆದ್ಯತೆಯಾಗಲಿ"**

"ವಿದ್ಯಾರ್ಥಿಗಳು ನಿತ್ಯಹೊಸ, ಹೊಸ ವಿಚಾರಗಳನ್ನು ಕಲಿಯುವ ಮತ್ತು ಅನ್ವೇಷಣಾ ಮನೋಭಾವ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರಬೇಕು. ಹಕ್ಕುಗಳು ಮತ್ತು ಕರ್ತವ್ಯವನ್ನು ಸಮಾನವಾಗಿ ನಿರ್ವಹಿಸಿದಾಗ ಬದುಕು ಉತ್ತಮ ಮಟ್ಟದಲ್ಲಿ ಸಾಗುತ್ತದೆ. ಕರ್ತವ್ಯ ವಿಫಲವಾದರೆ ಹಕ್ಕುಗಳು ಶಾಪವಾಗುತ್ತದೆ. ಹಕ್ಕು ಮತ್ತು ಕರ್ತವ್ಯದ ನಡುವೆ ಸದಾ ಘರ್ಷಣೆ ಇರುತ್ತದೆ. ಹೀಗಾಗಿ ಹಕ್ಕು ಮತ್ತು ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದರೆ ಮೌಲ್ಯಯುತ ಜೀವನ ಲಭ್ಯವಾಗುತ್ತದೆ. ಅನ್ಯಾಯದ ಮಾರ್ಗದಲ್ಲಿ ಗೆಲುವು ಸಂಪಾದಿಸುವುದಕ್ಕಿಂತ ನ್ಯಾಯಮಾರ್ಗದಲ್ಲಿ ಸೋಲುವುದೇ ಶ್ರೇಷ್ಠ" ಎಂದು ಶ್ರೀದೇವಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಮೊದಲನೇ ವರ್ಷದ ಡಿಪ್ಲೋಮೋ ತರಗತಿಗೆ ಆಗಸ್ಟ್ 20ರಂದು ಚಾಲನೆ ನೀಡಿದ ತುಮಕೂರಿನ ರಾಮಕೃಷ್ಣ ಮಠದ ವೀರೇಶಾನಂದ ಸರಸ್ವತಿ ಸ್ವಾಮೀಜಿ ಪ್ರತಿಪಾದಿಸಿದರು.

ಸಮಾರಂಭದಲ್ಲಿ ಶ್ರೀದೇವಿ ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟೇಬಲ್ ಟ್ರಸ್ಟಿಗಳಾದ ಡಾ. ಲಾವಣ್ಯ, ಅಂಬಿಕಾ ಹುಲಿನಾಯ್ಕರ್ ಮತ್ತು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ನರೇಂದ್ರ ವಿಶ್ವನಾಥ್ ಪಾಲಿಟೆಕ್ನಿಕ್ ಕಾಲೇಜು ಪ್ರಾಂಶುಪಾಲ ಎಸ್. ಬಿ. ಲೋಕೇಶ್ ಮೊದಲಾದವರು ಭಾಗಿಯಾಗಿದ್ದರು.

▪ **ವರದಿ: ಎನ್. ಆನಂದ**

# ಸ್ವಾವಲಂಬಿತ ಬದುಕಿಗೆ ಆಸರೆಯಾದ ಗ್ರಾಮೀಣಾಭಿವೃದ್ಧಿ ಯೋಜನೆ



ಮಹಿಳೆಯರ ಸ್ವಾವಲಂಬಿತ ಬದುಕು ಮತ್ತು ಆರ್ಥಿಕ ಸಮಾನತೆಗೆ ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಯೋಜನೆ ಮಹತ್ತರ ಕೊಡುಗೆ ನೀಡಿದೆ ಎಂದು ಶ್ರೀದೇವಿ ಚಾರಿಟೇಬಲ್ ಟ್ರಸ್ಟಿ ಹಾಗೂ ನೇತ್ರತಜ್ಞೆ ಡಾ. ಲಾವಣ್ಯ ರಮಣ ಅವರು ಹೇಳಿದ್ದಾರೆ. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ.ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸಾಮೂಹಿಕ ಅಷ್ಟಲಕ್ಷ್ಮಿ ಪೂಜಾ ಮತ್ತು ಧಾರ್ಮಿಕಸಭಾ ಕಾರ್ಯಕ್ರಮಕ್ಕೆ 19.8.2025 ರಂದು ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು. "ಮಹಿಳೆ ಕುಟುಂಬದಲ್ಲಿ ಮಾತ್ರವಲ್ಲದೇ ಹೊರಗಿನ ಸಮಾಜದಲ್ಲಿಯೂ ಸಕಾರಾತ್ಮಕ ಪಾತ್ರ ನಿರ್ವಹಿಸಿ, ದೈಹಿಕ ಮತ್ತು ಮಾನಸಿಕ ಆರೋಗ್ಯ ಹೇಗೆ ಕಾಪಾಡಿಕೊಳ್ಳುವುದು ಅಗತ್ಯ. ಎಲ್ಲಿ ಮಹಿಳೆಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ. ಹೆಣ್ಣು ಹುಟ್ಟಿದರೆ ಅನಿಷ್ಟ ಗಂಡು ಹುಟ್ಟಿದರೆ ಅದೃಷ್ಟ ಎಂಬ ಹಿಂದಿನ ನಂಬಿಕೆ ಬದಲಾಗಿದೆ. ಈಗ ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಸರಿ ಸಮಾನವಾಗಿ ಮುಂದುವರಿದು ಸಾಧನೆ ಮಾಡಿದ್ದಾರೆ. ಒನಕೆ ಓಬವ್ವ, ಕಿತ್ತೂರು ಚನ್ನಮ್ಮ, ಪ್ರಧಾನಿ ಇಂದಿರಾಗಾಂಧಿ, ಸಾಲುಮರದ ತಿಮ್ಮಕ್ಕ, ಕೇಂದ್ರಸಚಿವೆ ನಿರ್ಮಲ ಸೀತಾರಾಮನ್ ಅವರುಗಳನ್ನು ಉದಾಹರಣೆಯಾಗಿ ನೋಡಬಹುದು" ಎಂದು ಅವರು ಪ್ರತಿಪಾದಿಸಿದ್ದಾರೆ.

ಶ್ರೀಕಾರ ವೀರಬಸವ ಮಹಾಸ್ವಾಮೀಜಿ ಮಾತನಾಡಿ "ಪ್ರಕೃತಿಯ ಜೊತೆ ಮನುಷ್ಯ ಹೊಂದಿಕೊಂಡು ಬಾಳಿದರೆ ಯಾವ ವೈದ್ಯರ ಆಸರೆಯೂ ಬೇಡ" ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸತೀಶ್ ಸುವರ್ಣ ಅವರು ಶ್ರೀಕ್ಷೇತ್ರ ಸಮಾಜಸೇವಾ ಕಾರ್ಯಗಳನ್ನು ವಿವರಿಸಿದರು. ಜಿಲ್ಲಾ ಜನ ಜಾಗೃತಿ ವೇದಿಕೆ ಅಧ್ಯಕ್ಷ ಅಮರನಾಥ್ ಶೆಟ್ಟಿ ಅವರು "ಯುಟ್ಯೂಬ್ ಮತ್ತು ಮೊಬೈಲ್ ಹಾವಳಿಯಿಂದ ಯುವಜನಾಂಗ ದಾರಿತಪ್ಪುತ್ತಿದ್ದಾರೆ" ಎಂದು ತಮ್ಮ ಅಳಲನ್ನು ತೋಡಿಕೊಂಡರು.

ವಿಶ್ವ ಅಂಗಾಂಗ ದಾನದ ದಿನಾಚರಣೆ

# ಅನ್ನದಾನದಂತೆ ಅಂಗಾಂಗದಾನವು ಕೂಡ ಜನಪ್ರಿಯವಾಗಬೇಕು

"ಅನ್ನದಾನದಂತೆ ಶರೀರದ ಅಂಗಾಂಗದಾನವು ಕೂಡ ಜನಪ್ರಿಯವಾಗಿ, ಸಾವಿನ ದವಡೆಯಲ್ಲಿರುವ ರೋಗಿಗಳ ಬಾಳಿನಲ್ಲಿ ಹೊಸಬೆಳಕು ಮೂಡಿಸಬೇಕಿದೆ" ಎಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್.ಹುಲಿನಾಯ್ಕರ್ ಪ್ರತಿಪಾದಿಸಿದ್ದಾರೆ.

ವಿಶ್ವ ಅಂಗಾಂಗದಾನದ ದಿನದ ಅಂಗವಾಗಿ 12.8.2025ರಂದು ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು "ಅಂಗಾಂಗ ಕಸಿಮಾಡಲು ಶ್ರೀದೇವಿ ಆಸ್ಪತ್ರೆಗೆ ಸರಕಾರದಿಂದ ಅನುಮತಿ ದೊರೆತಿದ್ದು. ಮುಂದಿನ ದಿನಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಂಗಾಂಗ ಕಸಿ ಮಾಡಲಾಗುವುದು. ಸದ್ಯ ಮೂತ್ರಪಿಂಡದ ಕಸಿ ಮತ್ತು ಕಣ್ಣಿನ ಆಪರೇಷನ್ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಲಿವರ್, ಶ್ವಾಸಕೋಶ, ಹೃದಯಗಳ ಬದಲಿ ಜೋಡಣೆಯಂತಹ ಅಂಗಾಂಗಕಸಿ ಪ್ರಕ್ರಿಯೆ ಆರಂಭಿಸಲಾಗುವುದು. ಇದಕ್ಕೆ ಆಸ್ಪತ್ರೆಯಲ್ಲಿ ನುರಿತ ವೈದ್ಯರ ತಂಡ ಸಜ್ಜಾಗಿದೆ. ಅಂಗಾಂಗದಾನದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಮಾಧ್ಯಮ ಮತ್ತು ಧಾರ್ಮಿಕ ಮುಖಂಡರು, ಸಾಮಾಜಿಕ, ಆರೋಗ್ಯ ಕಾರ್ಯಕರ್ತರು ಹೆಚ್ಚಿನ ಕಾಳಜಿ ವಹಿಸಬೇಕು.

"ದೇಶದಲ್ಲಿರುವ ಬೇಡಿಕೆಯ ಪ್ರಮಾಣದಷ್ಟು ಅಂಗಾಂಗ ದೊರೆಯದೇ ಇರುವುದಕ್ಕೆ ಮುಖ್ಯ ಕಾರಣ ಎಂದರೆ ಜಾಗೃತಿ ಇಲ್ಲದೆ ಇರುವುದು. ಹೀಗಾಗಿ ಶ್ರೀದೇವಿ ಕಾಲೇಜು ವತಿಯಿಂದ ಮುಂದಿನ ದಿನಗಳಲ್ಲಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಅಂಗಾಂಗ ದಾನದಿಂದ ಜನರಿಗೆ ಆಗುವ ಪ್ರಯೋಜನವನ್ನು ಶಿಬಿರಗಳ ಮೂಲಕ ತಿಳಿಸಿಕೊಡಲಾಗುವುದು" ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು.

ಶ್ರೀದೇವಿ ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ್ ಹುಲಿನಾಯ್ಕರ್ ಮಾತನಾಡಿ "ವಿಶ್ವ ಅಂಗಾಂಗ ದಿನದ ಅಂಗವಾಗಿ ಕಾಲೇಜಿನ ವತಿಯಿಂದ ಒಂದು ವಾರ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಇದರ ಅಂಗವಾಗಿ ಬೇರೆ–ಬೇರೆ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಒಬ್ಬ ವ್ಯಕ್ತಿ ಅಂಗಾಂಗ ದಾನ ಮಾಡುವುದರಿಂದ 7 ರಿಂದ 8 ಜೀವಗಳನ್ನು ಉಳಿಸಬಹುದು ಅಥವಾ ಅವರಿಗೆ ಮರುಜನ್ಮ ನೀಡಬಹುದು. ಈ ನಿಟ್ಟಿನಲ್ಲಿ ಜನರಲ್ಲಿ ತಿಳುವಳಿಕೆ ಮೂಡಿಸಬೇಕಾಗಿದೆ" ಎಂದರು.

■ ವರದಿ: ಎನ್. ಆನಂದ

## ಅಂಗಾಂಗ ದಾನ ಶಾಲಾ ಪಠ್ಯ ವಿಷಯವಾಗಬೇಕು

'ಅಂಗಾಂಗಗಳ ದಾನದ ವಿಷಯಗಳನ್ನು ಶಾಲಾ ಪಠ್ಯಗಳಲ್ಲಿ ಅಳವಡಿಸಬೇಕಿದೆ" ಎಂದು ಬೆಂಗಳೂರಿನ ಆಸ್ಟರ್ ಆಸ್ಪತ್ರೆಯ ಹಿರಿಯ ವೈದ್ಯ ಸುಂದರ್ ಶಂಕರನ್ ಹೇಳಿದ್ದಾರೆ. ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಆಗಸ್ಟ್ 13ರಂದು ಏರ್ಪಡಿಸಿದ್ದ ವಿಶ್ವ ಅಂಗಾಂಗ ದಾನ ದಿನ ಕಾರ್ಯಕ್ರಮದಲ್ಲಿ ಅವರು ಈ ವಿಷಯ ತಿಳಿಸಿದರು. ಶ್ರೀಯುತರು "ಅಂಗಾಂಗ ದಾನ ಪ್ರಕ್ರಿಯೆಯಲ್ಲಿ ಕನ್ನಡದ ವರನಟ ಡಾ. ರಾಜಕುಮಾರ್ ಕುಟುಂಬದ ಪಾತ್ರ ಇತರರಿಗೆ ಮಾದರಿಯಾಗಿದೆ. ಸಾವಿನ ಅನಂತರ ಕಣ್ಣುಗಳನ್ನು ದಾನ ಮಾಡುವ ಮೂಲಕ ಡಾ. ರಾಜ್ ಕುಟುಂಬ ಎಲ್ಲರಿಗೂ ಪ್ರೇರಣೆಯಾಗಿದ್ದಾರೆ. ಇದರಿಂದಾಗಿ ಸಾವಿರಾರು ಜನ ಬೆಳಕು ಕಾಣುವಂತಾಗಿದೆ. ಒಟ್ಟಾರೆ ಅಂಗಾಂಗ ದಾನ ಪ್ರಕ್ರಿಯೆಯಲ್ಲಿ ವ್ಯಕ್ತಿಯ ಕುಟುಂಬದ ಸದಸ್ಯರ ಪಾತ್ರ ಮಹತ್ವಪೂರ್ಣದ್ದು. ಈಗ ಜನರು ಧೈರ್ಯದಿಂದ, ಹೆಚ್ಚಿನ ಸಂಖ್ಯೆಯಲ್ಲಿ ಅಂಗಾಂಗ ದಾನ ಮಾಡಲು ಮುಂದೆ ಬರುತ್ತಿದ್ದಾರೆ.




"ದೇವರು ಎರಡು ಮೂತ್ರಪಿಂಡಗಳನ್ನು ನಮಗೆ ಕೊಟ್ಟಿರುವುದು ಒಂದನ್ನು ಬೇರೆಯವರಿಗಾಗಿ ದಾನ ಕೊಡಲು ಎಂಬುದನ್ನು ಮರೆಯಬಾರದು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸಹ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು. ಹೀಗಾಗಿ ಬದುಕಿದ್ದಾಗಲೇ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಕಿಡ್ನಿ ದಾನಮಾಡುವ ವಿಶಾಲ ಮನೋಭಾವ ನಾವು ಬೆಳೆಸಿಕೊಳ್ಳಬೇಕು. ಇದರಿಂದ ನಮ್ಮ ಆರೋಗ್ಯಕ್ಕೆ ಯಾವುದೇ ಸಮಸ್ಯೆಯಾಗುವುದಿಲ್ಲ" ಎಂದು ಭರವಸೆ ನೀಡಿದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡಿ "ನಾವು ಜನರಲ್ಲಿ ಅಂಗಾಂಗ ದಾನದ ಬಗ್ಗೆ ನಿರಂತರವಾಗಿ ಜಾಗೃತಿಯನ್ನು ಉಂಟು ಮಾಡುತ್ತಿರಬೇಕು" ಎಂದರು.

ಇದೇ ಸಂದರ್ಭದಲ್ಲಿ ಶಾಂತಕುಮಾರ್, ಸುರೇಶ್‌ಕುಮಾರ್ ಚಂದ್ರಕುಮಾರ್ ಎಂಬುವರು ಅಂಗಾಂಗ ದಾನ ಪಡೆಯುವವರ ರಿಜಿಸ್ಟರ್‌ಗೆ ಸಹಿ ಹಾಕಿದರು. ತಂದೆ ನಂಜೇಗೌಡರವರಿಂದ ಕಿಡ್ನಿಯ ದಾನ ಪಡೆದ ಮಧುಗಿರಿಯ ನಾಗರಾಜ್ ಮತ್ತು ತಾಯಿಯಿಂದ ದಾನ ಪಡೆದ ಸಲ್ಮಾನ್‌ಖಾನ್ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

## ಅಗ್ನಿಕುಂಡದಲ್ಲಿ ನಿಂತು ಕೆಲಸ

ಅಂಗಾಂಗ ಮರುಜೋಡಣೆಯ ಪ್ರಕ್ರಿಯೆಯಲ್ಲಿ ತೊಡಗಿರುವ ವೈದ್ಯರು 'ತಮ್ಮಷ್ಟಕ್ಕೆ ತಾವು ಕೆಲಸ ಮಾಡಿಕೊಂಡು ಹೋಗುತ್ತೇನೆ' ಎಂದರೆ ಸಮಾಜ ಬಿಡುವುದಿಲ್ಲ. ಅವರನ್ನು ಅನಗತ್ಯವಾಗಿ ಕಷ್ಟಕ್ಕೆ ಸಿಲುಕಿಸುತ್ತದೆ. ತೊಂಬತ್ತರ ದಶಕದಲ್ಲಿ ನಡೆದ ಪ್ರಸಂಗವಿದು. ಬೆಂಗಳೂರಿನ ಯಲ್ಲಮ್ಮ ದಾಸಪ್ಪ ಆಸ್ಪತ್ರೆಯಿಂದ ಡಾ. ಪಾಟೀಲ್ ಎನ್ನುವ Transplant Surgeon ಸಂದರ್ಶಕ ವೈದ್ಯರಾಗಿ ನಮ್ಮ ಶ್ರೀದೇವಿ ಆಸ್ಪತ್ರೆಗೆ ಬರುತ್ತಿದ್ದರು. ಆಗ ಕರ್ನಾಟಕದಲ್ಲಿ ಜನತಾದಳದ ಸರ್ಕಾರವಿತ್ತು. ಜೆ.ಎಚ್. ಪಟೇಲ್ ಮುಖ್ಯಮಂತ್ರಿ ಆಗಿದ್ದರು

ಯಲ್ಲಮ್ಮ ದಾಸಪ್ಪ ಆಸ್ಪತ್ರೆಯನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು ಬಹುದೊಡ್ಡ ಷಡ್ಯಂತ್ರವೊಂದು ರೂಪಗೊಂಡಿತು. 'ಅಕ್ರಮ ಮೂತ್ರಪಿಂಡ ಮರು ಜೋಡಣೆ' 'ಅಕ್ರಮವಾಗಿ ಮೂತ್ರ ಪಿಂಡದ ಮಾರಾಟ" 'ಕಾಳಸಂತೆಯಲ್ಲಿ ಕಿಡ್ನಿ' ಎಂದೆಲ್ಲಾ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಬಹುದೊಡ್ಡ ಸುದ್ದಿ ಮಾಡಿದವು. ವಿಧಾನಸಭೆಯಲ್ಲಿ ಇದರ ಬಗ್ಗೆ ಬಿಸಿಬಿಸಿ ಚರ್ಚೆಯಾಯಿತು. ಎಲ್ಲ ಕಡೆ ಜನರು 'ಅಮಾಯಕರ ಕಿಡ್ನಿ ಕಳವಾಗುತ್ತಿದೆ' ಎಂದು ಮಾತನಾಡತೊಡಗಿದರು.

ಜನ ಎಷ್ಟು ಗಾಬರಿಯಾಗಿದ್ದರು ಎಂದರೆ ನಮ್ಮ ಶ್ರೀದೇವಿ ಆಸ್ಪತ್ರೆಯಲ್ಲಿ ಎಷ್ಟೋ ವರ್ಷಗಳ ಹಿಂದೆ ಮೂತ್ರಪಿಂಡಕ್ಕೆ ಸಂಬಂಧಪಟ್ಟಂತೆ ಆಪರೇಷನ್ ಮಾಡಿಸಿಕೊಂಡವರು ನಮ್ಮಲ್ಲಿಗೆ ಬಂದು 'ಸರ್, ನನ್ನ ಕಿಡ್ನಿ ಸರಿಯಾಗಿದೆಯೇ' ನೋಡಿ ಎನ್ನುತ್ತಿದ್ದರು. ಮೂತ್ರಪಿಂಡದ ಮರುಜೋಡಣೆಯ ಆಪರೇಷನ್ ರಾತ್ರೋರಾತ್ರಿ ಆಗುವುದಿಲ್ಲ ಎನ್ನುವುದು ತಮಗೆಲ್ಲಾ ತಿಳಿದ ವಿಚಾರ. ಅದಕ್ಕೆ ಮೂರು–ನಾಲ್ಕು ಹಂತಗಳಿರುತ್ತವೆ. ನೆಫ್ರಾಲಜಿಸ್ಟ್ ಮತ್ತು ಟ್ರಾನ್ಸ್‌ಪ್ಲಾಂಟ್ ಸರ್ಜನ್, ಲ್ಯಾಬ್ ಸಿಬ್ಬಂದಿ, ಜನರಲ್ ಸರ್ಜನ್, ಅಗತ್ಯವಾದರೆ ಫಿಜಿಷಿಯನ್ ಮತ್ತು ಹತ್ತಾರು ಅರೆ ವೈದ್ಯಕೀಯ ಸಿಬ್ಬಂದಿಗಳು ಮೂತ್ರಪಿಂಡದ ಮರುಜೋಡಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಯಾರನ್ನೂ ಕತ್ತಲೆಯಲ್ಲಿಟ್ಟು ಒಬ್ಬರ ಕಿಡ್ನಿಯನ್ನು ತೆಗೆದು ಮತ್ತೊಬ್ಬರಿಗೆ ಅಳವಡಿಸಲು ಸಾಧ್ಯವೇ ಇಲ್ಲ. ಇದನ್ನು ನಮ್ಮಂತಹ ಹತ್ತಾರು ವೈದ್ಯರು ಇದನ್ನು ಎಷ್ಟು ಹೇಳಿದರೂ ಪೋಲಿಸ್‌ನವರು, ರಾಜಕಾರಣಿಗಳು, ಮಾಧ್ಯಮದವರು ಹಾಗೂ ಸಮೂಹಸನ್ನಿಗೆ ಒಳಗಾದ ಸಾರ್ವಜನಿಕರು ಸತ್ಯವನ್ನು ಒಪ್ಪಿಕೊಳ್ಳಲೇ ಇಲ್ಲ.

ಈ ಪ್ರಕರಣ ನ್ಯಾಯಾಲಯಕ್ಕೆ ಹೋಯಿತು. ಸಾಮಾನ್ಯ ಜ್ಞಾನ ಮತ್ತು ವೈದ್ಯಕೀಯ ವಿಚಾರಗಳನ್ನು ತಿಳಿದಿದ್ದ ಮಾನ್ಯ ನ್ಯಾಯಾಧೀಶರು ಪೊಲೀಸ್‌ನವರನ್ನು ಪ್ರಶ್ನಿಸಿದರು. ಅವರಿಂದ ಸಮರ್ಪಕ ಉತ್ತರ ದೊರೆಯದೆ ಕೇಸ್ ಬಿದ್ದುಹೋಯ್ತು. ಪೊಲೀಸ್ ವ್ಯವಸ್ಥೆ ಬೆತ್ತಲಾಯಿತು. ಡಾ. ಪಾಟೀಲ್ ಅಂತವರು ನಿರಪರಾಧಿಗಳೆಂದು ಸಾಬೀತಾಯಿತು. ಆದರೆ ಅಂತಹವರ ಬದುಕಿನಲ್ಲಿ ಆಗಬೇಕಾದ ಡ್ಯಾಮೇಜ್ ಆಗಿ ಹೋಗಿತ್ತು.

ಸ್ವಲ್ಪ ದಿನಗಳ ನಂತರ ಗೊತ್ತಾಯ್ತು, ಕಿಡ್ನಿಯ ಮರುಜೋಡಣೆಯ ವಿಷಯವನ್ನು ಇಟ್ಟುಕೊಂಡು ಮದ್ಯದ ಎರಡು ಶಕ್ತಿ ವಲಯಗಳು ಹೋರಾಟ ನಡೆಸಿದ್ದವು. ಒಂದು ಗುಂಪಿಗೆ ಸೇರಿದ್ದ ಆಸ್ಪತ್ರೆಯನ್ನು ಬಲಿಪಶು ಮಾಡುವುದು, ಅದರ ಹಿಂದಿನ ಉದ್ದೇಶವಾಗಿತ್ತು. ಇಂತಹ ಕಾಳಗಕ್ಕೆ ನಮ್ಮ ವೈದ್ಯರು ಬಲಿಪಶುವಾದರು. ಅದಕ್ಕಾಗಿ ಅಂಗಾಂಗ ದಾನದ ಪ್ರಕ್ರಿಯೆಯಲ್ಲಿ ನಾವು ಮೈಯೆಲ್ಲಾ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ. ಅದರಲ್ಲಿ ತೊಡಗಿರುವ ವೈದ್ಯರಿಗೆ ಅಗ್ನಿಕುಂಡದ ಮಧ್ಯೆ ನಿಂತು ಕೆಲಸ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಅವರಿಗೆ ಅದೊಂದು ದೊಡ್ಡ ಸವಾಲೇ ಆಗಿರುತ್ತದೆ.

## ಜಾಗೃತಿ ಜಾಥಾ


ಶ್ರೀದೇವಿ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆ ವತಿಯಿಂದ ಅಂಗಾಂಗ ದಾನದ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಜಾಥಾಕ್ಕೆ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಹುಲಿನಾಯ್ಕರ್ ಚಾಲನೆ ನೀಡಿದರು. ಅನಂತರ ಅವರು ಮಾತನಾಡುತ್ತಾ "ಅಂಗಾಂಗ ದಾನವು ಒಂದು ಅಮೂಲ್ಯವಾದ ಉಡುಗೊರೆ. ಅಂಗಾಂಗಗಳನ್ನು ದಾನ ಮಾಡುವ ಮೂಲಕ ಇನ್ನೊಬ್ಬರ ಜೀವವನ್ನು ಉಳಿಸಲು ಸಹಾಯ ಮಾಡುವ ಒಂದು ಉದಾತ್ತ ಕಾರ್ಯವಾಗಿದೆ. ಪ್ರತಿ ವರ್ಷ ಆಗಸ್ಟ್ 13ರಂದು ವಿಶ್ವ ಅಂಗಾಂಗ ದಾನ ದಿನವನ್ನು ಆಚರಿಸಲಾಗುತ್ತದೆ. ಇದು ಅಂಗಾಂಗಗಳ ದಾನದ ಬಗ್ಗೆ ಜಾಗೃತಿ ಮೂಡಿಸಲು ಮೀಸಲಾದ ದಿನವಾಗಿದೆ. ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತಗಳು ಹೆಚ್ಚಾಗಿರುವುದರಿಂದ ಅಂಗಾಂಗಳ ದಾನ ಮುಖ್ಯವಾಗಿರುತ್ತದೆ" ಎಂದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಸದಸ್ಯರಾದ ಅಂಬಿಕಾ ಹುಲಿನಾಯ್ಕರ್ ಅವರು "ಐದು ಲಕ್ಷ ಜನ ಅಂಗಾಂಗ ದಾನಕ್ಕಾಗಿ ಕಾಯುತ್ತಿದ್ದಾರೆ. 2013ರಲ್ಲಿ 5 ಸಾವಿರಕ್ಕೂ ಕಡಿಮೆ ಟ್ರಾನ್ಸ್‌ಪ್ಲಾಂಟ್ ಆಗಿತ್ತು. 2023ರಲ್ಲಿ 18 ಸಾವಿರ ಅಂಗಗಳು ಟ್ರಾನ್ಸ್‌ಪ್ಲಾಂಟ್ ಆಗಿದೆ. ಅಂಗಾಂಗಗಳ ದಾನದ ಬಗ್ಗೆ ಇರುವ ತಪ್ಪುಕಲ್ಪನೆಯನ್ನು ನಿವಾರಿಸಬೇಕು" ಎಂದು ಕರೆ ನೀಡಿದರು.

ತಜ್ಞರಾದ ಡಾ. ಯಶವಂತ್ ಗಂಗಯ್ಯ ಅವರು "ಅಂಗಾಂಗ ದಾನವು ಕೇವಲ ಒಬ್ಬ ವ್ಯಕ್ತಿಯ ಜೀವವನ್ನು ಉಳಿಸುವುದು ಮಾತ್ರವಲ್ಲ, ಬದಲಾಗಿ ಒಂದು ಕುಟುಂಬಕ್ಕೆ ಹೊಸ ಭರವಸೆಯನ್ನು ನೀಡುತ್ತದೆ ಮತ್ತು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತದೆ. ಈ ಉದಾತ್ತ ಕಾರ್ಯದಲ್ಲಿ ಭಾಗವಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ" ಎಂದರು.

ಮಾನವ ಸಂಪನ್ಮೂಲ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು "ನಮ್ಮ ವೈದ್ಯಕೀಯ ಕಾಲೇಜಿನಲ್ಲಿ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಯಶಸ್ವಿಯಾಗಿ ಮಾಡಲಾಗಿದೆ. ಶ್ರೀದೇವಿ ಸಂಸ್ಥೆಯೂ ಅಂಗಾಂಗದಾನದ ಮಾನ್ಯತೆ ಪಡೆದ ಕೇಂದ್ರ ಹಾಗೂ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಿಡ್ನಿ ಕಸಿಮಾಡುವ ಆಸ್ಪತ್ರೆಯೆಂದು ಪ್ರಸಿದ್ಧವಾಗಿದೆ" ಎಂದರು.

■ ವರದಿ: ಶೃತಿ ಬೆಳ್ಳಿಯಾರ್ ಹೆಚ್.ವಿ.



ಕಿಡ್ನಿ ಶಸ್ತ್ರಚಿಕಿತ್ಸೆಯ ಒಂದು ನೋಟ.

ವಿಶ್ವ ಅಂಗಾಂಗ ದಾನದ ದಿನಾಚರಣೆ

# ಕಿಡ್ನಿ ಕಸಿ - ಸ್ವಂತಕ್ಕೊಂದು, ದಾನಕ್ಕೊಂದು

**ಡಾ. ಸುಂದರ್ ಶಂಕರನ್**


"ಕಿಡ್ನಿ ಜೋಡಣೆ, ಕಸಿ ಎಂದರೆ ವೈಫಲ್ಯದ ಕಿಡ್ನಿ ತೆಗೆದು ದಾನಿಗಳಿಂದ ಪಡೆದ ಕಿಡ್ನಿಯನ್ನು ಕಸಿ ಮಾಡಲಾಗುತ್ತದೆ ಎಂಬುದು ತಪ್ಪು ಕಲ್ಪನೆ. ವಿಫಲಗೊಂಡ ಕಿಡ್ನಿಯನ್ನು ದೇಹದಿಂದ ಹೊರ ತೆಗೆಯುವುದಿಲ್ಲ. ಬದಲಿಗೆ ಕೆಳಭಾಗದಲ್ಲೇ ಹೊಸ ಕಿಡ್ನಿಯನ್ನು ಕಸಿ ಮಾಡಲಾಗುತ್ತದೆ. ಬಹಳ ವಿಶೇಷ ಸಂದರ್ಭಗಳಲ್ಲಿ ಅಂದರೆ ಸೋಂಕು, ಕ್ಯಾನ್ಸರ್ ಅಂಶ ಕಾಣಿಸಿಕೊಂಡಾಗ ಮಾತ್ರವೇ ಅದನ್ನು ಹೊರ ತೆಗೆಯಲಾಗುತ್ತದೆ. ಹಾಗೆ ನೋಡಿದರೆ ಬದಲಿ ಅಂಗಾಂಗ ಜೋಡಣೆಯಲ್ಲಿ ಕಿಡ್ನಿ ಜೋಡಣೆಗೆ ಮಾತ್ರ ಹೆಚ್ಚು ಸಮಯದ ಅವಕಾಶವನ್ನು ಭಗವಂತ ಕೊಟ್ಟಿದ್ದಾನೆ. ಹೃದಯ, ಲಿವರ್ ಮುಂತಾದ ಇತರೆ ದೇಹದ ಅಂಗಾಂಗಗಳನ್ನು ಇದಕ್ಕಿಂತಲೂ ವೇಗವಾಗಿ ರೋಗಿಗೆ ಜೋಡಿಸಬೇಕಾದ ಅನಿವಾರ್ಯತೆಯಿರುತ್ತದೆ."




### ಕಿಡ್ನಿ ಕಸಿ: ಹೇಗೆ ಮಾಡಲಾಗುತ್ತದೆ

ಜೀವಂತ ವ್ಯಕ್ತಿಯಿಂದ ಪಡೆದ ಕಿಡ್ನಿ ಅಥವಾ ಬ್ರೈನ್ ಡೆಡ್ ಆದ ವ್ಯಕ್ತಿಗಳಿಂದ ಪಡೆದ ಕಿಡ್ನಿ ಹೇಗೆ ಕೆಲಸ ಮಾಡುತ್ತದೆ, ಹೊರ ತೆಗೆದ ಕಿಡ್ನಿಯನ್ನು ಎಷ್ಟು ಸಮಯ ಸಂರಕ್ಷಿಸಬಹುದು, ಎಷ್ಟು ಬೇಗ ಜೋಡಿಸಬೇಕು ಎಂಬುದನ್ನು ಆಸ್ಟರ್ ಆಸ್ಪತ್ರೆಯ ಹಿರಿಯ ವೈದ್ಯ ಡಾ. ಸುಂದರ್ ಶಂಕರನ್ ಶ್ರೀದೇವಿ ಅಂತರಂಗ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ವಿವರಿಸಿದ್ದಾರೆ.

ಮೂತ್ರಪಿಂಡ ವೈಫಲ್ಯದಲ್ಲಿ ಎರಡು ವಿಧ. ಒಂದು ತಾತ್ಕಾಲಿಕ, ಮತ್ತೊಂದು ಶಾಶ್ವತ. ತಾತ್ಕಾಲಿಕವಾಗಿ ತೊಂದರೆ ಇರುವ ರೋಗಿಗಳಿಗೆ ಡಯಾಲಿಸಿಸ್ ಮತ್ತು ಔಷಧೋಪಚಾರ ಮಾಡುವ ಮೂಲಕ ಆದಷ್ಟು ಬೇಗ ಸರಿಪಡಿಸಬಹುದು. ಆದರೆ ಶಾಶ್ವತವಾಗಿ ವೈಫಲ್ಯಗೊಂಡದ್ದನ್ನು ಸರಿಪಡಿಸಲು ಸಾಧ್ಯವಿಲ್ಲ. ಅದರ ಜಾಗದಲ್ಲಿ ಬೇರೆಯ ಕಿಡ್ನಿಯನ್ನು ಅಳವಡಿಸುವುದೇ ಉತ್ತಮ. ಕಿಡ್ನಿಯ ವೈಫಲ್ಯದಲ್ಲಿ ಐದು ಹಂತಗಳಿವೆ. ಐದನೇ ಹಂತದ ದಾಟಿದ ಅನಂತರ ಕಿಡ್ನಿ ಉಪಯೋಗಕ್ಕೆ ಬರುವುದಿಲ್ಲ. ಪರ್ಯಾಯವಾಗಿ ಕಸಿ ಮಾಡಲೇಬೇಕಾಗುತ್ತದೆ. ಡಯಲಿಸಿಸ್ ಮಾಡಿದರೂ ಅದು ಶಾಶ್ವತ ಪರಿಹಾರವಾಗದು. ಕಿಡ್ನಿಯು ಮಾಡುವ ಕೆಲಸವನ್ನು ಅದು ಪರಿಪೂರ್ಣವಾಗಿ ಮಾಡುವುದಿಲ್ಲ. ಮಾಡಲು ಸಾಧ್ಯವಿಲ್ಲ.




ಬೇರೆಯವರಿಂದ ದಾನ ಪಡೆದ ಕಿಡ್ನಿಯು ಬೇರೆ ವ್ಯಕ್ತಿಯ ದೇಹಕ್ಕೆ ಹೊಂದಿಕೊಳ್ಳಬೇಕು. ಈ ಸನ್ನಿವೇಶದಲ್ಲಿ ಸರಿಯಾದ ಔಷಧೋಪಚಾರ ನಡೆಯದೇ ಹೋದರೆ ಸೋಂಕು ಕಾಣಿಸಿಕೊಳ್ಳುತ್ತದೆ ಕೆಲವು ಸಲ ಮಾಡಿದ ಕಸಿ ಕೂಡ ವ್ಯರ್ಥವಾಗುತ್ತದೆ.

ಒಬ್ಬ ವ್ಯಕ್ತಿಗೆ ಕಿಡ್ನಿ ಅಳವಡಿಸಿದ ನಂತರ ಅದು ತಕ್ಷಣದಿಂದಲೇ ಕೆಲಸ ಪ್ರಾರಂಭ ಮಾಡುತ್ತದೆ. ಇದರಲ್ಲಿ ಎರಡು ವಿಧವಿದೆ. ಜೀವಂತವಾಗಿ ಬದುಕಿರುವ ವ್ಯಕ್ತಿಯಿಂದ ದಾನ ಪಡೆದ ಕಿಡ್ನಿಯನ್ನು ಅಳವಡಿಸಿದಾಗ ಅದು ತಕ್ಷಣವೇ ಕೆಲಸ ಮಾಡಲು ಪ್ರಾರಂಭ ಮಾಡುತ್ತದೆ ಆದರೆ ಬ್ರೈನ್ ಡೆಡ್ ಆದ (ವಿಶೇಷವಾಗಿ ರಸ್ತೆ ಅಪಘಾತದಲ್ಲಿ ಮೃತಪಟ್ಟ) ವ್ಯಕ್ತಿಗಳಿಂದ ಪಡೆದ ಕಿಡ್ನಿಯು ಕೆಲಸ ಮಾಡಬೇಕಾದರೆ ಎರಡು, ಮೂರು ದಿನ ತೆಗೆದುಕೊಳ್ಳುತ್ತದೆ. ಹೀಗಾಗಿ ಜೀವಂತ ದಾನಿಗಳಿಂದ ದಾನಪಡೆದು ಅಳವಡಿಸುವುದೇ ಹೆಚ್ಚು ಸೂಕ್ತ, ಸಮಂಜಸ ಮತ್ತು ಆರೋಗ್ಯಕರ ಎಂಬುದನ್ನು ಅವರು ಒತ್ತಿ ಹೇಳುತ್ತಾರೆ.

### ಡಾ. ಸುಂದರ್ ಶಂಕರನ್ ಪರಿಚಯ

ಡಾ ಸುಂದರ ಶಂಕರನ್ 1955 ರಲ್ಲಿ ಹಿಂದಿನ ಮದ್ರಾಸ್ (ಈಗಿನ ಚೆನ್ನೈ) ನಗರದಲ್ಲಿ ಜನಿಸಿದರು. ಮೂಲತಃ ಕುಂಭಕೋಣದ ಮೇಲ್ವರ್ಗದ ಮನೆತನದವರು. ತಾಯಿ ಗಂಗಾ. ತಂದೆ ಡಾ. ಶಂಕರನ್. ಬಾಲ್ಯದ ವಿದ್ಯಾಭ್ಯಾಸ ಒಂದರಿಂದ 4 ನೇ ತರಗತಿಯವರೆಗೆ ದೆಹಲಿಯ ತಮಿಳ್ ಮಾಡೆಲ್ ಶಾಲೆಯಲ್ಲಿ. ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್, ಎಂ.ಡಿ. ಮಾಡಿ, ವೆಲ್ಲೂರಿನ ಸಿಎಂಸಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಿ ನಂತರ 1985ರಲ್ಲಿ ಬೆಂಗಳೂರಿನ ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಕಿಡ್ನಿಟ್ರಾನ್ಸ್‌ಪ್ಲಾಂಟ್ ತಜ್ಞರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಬೆಂಗಳೂರಿನ ಆಸ್ಟರ್ ಆಸ್ಪತ್ರೆಯಲ್ಲಿ ರೀನಲ್ ಟ್ರಾನ್ಸ್ ಪ್ಲಾಂಟ್ ಪ್ರೋಗ್ರಾಮ್ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ.. ಇವರ ವೈದ್ಯಕೀಯ ಸೇವೆಗೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ಡಯಾಬಿಟಿಕ್, ಬಿ.ಪಿ. ಬರದಂತೆ, ಹೆಚ್ಚಾಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ದೇವರು ಎರಡು ಕಿಡ್ನಿ ಕೊಟ್ಟಿರುವುದು ಒಂದನ್ನು ಮತ್ತೊಬ್ಬರಿಗೆ ದಾನ ಮಾಡಲಿಕ್ಕೆ ಎಂಬುದನ್ನು ಮತ್ತೆಮತ್ತೆ ಕಿವಿ, ಹೃದಯಕ್ಕೆ ನಾಟುವ ರೀತಿ ಹೇಳುವುದು ಇವರ ವೃತ್ತಿಬದುಕಿನ ವೈಶಿಷ್ಟ, ಅನುಭವದ ಸಾರ.

### ಕಿಡ್ನಿಯನ್ನು ಹೇಗೆ ರಕ್ಷಣೆ ಮಾಡುತ್ತಾರೆ?

ಒಬ್ಬ ವ್ಯಕ್ತಿಯಿಂದ ಹೊರ ತೆಗೆದು ಸಂಗ್ರಹ ಮಾಡಿದ ಗರಿಷ್ಠ ಎಂದರೆ 24 ಗಂಟೆಯೊಳಗಾಗಿ ಕಿಡ್ನಿಯನ್ನು ಬೇರೆಯವರಿಗೆ ಅಳವಡಿಸದಿದ್ದರೆ ಅದು ಉಪಯೋಗಕ್ಕೆ ಬರುವುದಿಲ್ಲ. ಕಿಡ್ನಿಯನ್ನು ವೈದ್ಯರು ಕಳವು ಮಾಡುತ್ತಾರೆ ಎಂಬ ಆರೋಪದಲ್ಲಿ ಸತ್ಯವಿಲ್ಲ, ಕಳವು ಮಾಡಲು ಸಾಧ್ಯವಿಲ್ಲ.

ದಾನಿಯಿಂದ ಪಡೆದ ಕಿಡ್ನಿಯನ್ನು ತಕ್ಷಣವೇ 4 ಅಥವಾ 5 ಗಂಟೆಗಳ ಒಳಗಾಗಿ ರೋಗಿಗೆ ಜೋಡಿಸಿದರೆ. ಹೆಚ್ಚು ಪ್ರಯೋಜನಕಾರಿ. ಇನ್ನು ಸರಳವಾಗಿ, ಬಿಡಿಸಿ ಹೇಳಬೇಕೆಂದರೆ ಒಂದು ಆಪರೇಷನ್ ಥಿಯೇಟರಲ್ಲಿ ಕಿಡ್ನಿಯನ್ನು ತೆಗೆಯುವುದು, ಮತ್ತೊಂದು ಆಪರೇಷನ್ ಥಿಯೇಟರಲ್ಲಿ ಅದನ್ನು ದಾನಿಗೆ ತಕ್ಷಣವೇ ಜೋಡಿಸುವುದು ಉತ್ತಮ. ಇಲ್ಲದೆ ಹೋದಲ್ಲಿ ಮೂತ್ರಪಿಂಡ ಮತ್ತು ಆಪರೇಷನ್ ಮಾಡಿದ ವೈದ್ಯರ ಶ್ರಮ ಎರಡೂ ವ್ಯರ್ಥವಾಗುತ್ತದೆ.

ಕಿಡ್ನಿ ಕಸಿಗೆ ಖಾಸಗಿ ಆಸ್ಪತ್ರೆಗಳಲ್ಲಿ 5 ರಿಂದ 10 ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಆದರೆ ವಿಕ್ಟೋರಿಯಾ, ಬೌರಿಂಗ್‌ನಂತಹ ದೊಡ್ಡ ಸರ್ಕಾರಿ ಆಸ್ಪತ್ರೆಗಳಲ್ಲಿ ಇದಕ್ಕೆ ಎರಡರಿಂದ ಮೂರು ಲಕ್ಷ ರೂಪಾಯಿ ವೆಚ್ಚವಾಗಲಿದೆ. ತಮಿಳುನಾಡಿನ ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಇದನ್ನು ಉಚಿತವಾಗಿ ಮಾಡಲಾಗುತ್ತಿದೆ.

ಕಿಡ್ನಿಯನ್ನು ಕಸಿ ಮಾಡುವುದು, ಜೋಡಿಸುವುದು ದೊಡ್ಡ ವಿಷಯವಲ್ಲ, ಆದರೆ ಕಸಿ ಮಾಡಿದ ಅನಂತರ ಜೀವನಪರ್ಯಂತ ಅವರು ಔಷಧಿ ಮಾತ್ರೆಗಳಿಗೆ ಹೆಚ್ಚು ಹಣವನ್ನು ವಿನಿಯೋಗ ಮಾಡಬೇಕಾಗುತ್ತದೆ. ಆರಂಭದಲ್ಲಿ ಮಾತ್ರೆಗಳಿಗಾಗಿ ತಿಂಗಳಿಗೆ 25 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ತದನಂತರ ಜೀವಿತಾವಧಿಯವರೆಗೆ ಕನಿಷ್ಠ ತಿಂಗಳಿಗೆ 10 ಸಾವಿರ ರೂ. ಔಷಧೋಪಚಾರಕ್ಕೆ ವ್ಯಯಮಾಡಲೇ ಬೇಕಾಗುತ್ತದೆ.

ಸರ್ಕಾರ ಇಂತಹ ಬಡ ರೋಗಿಗಳಿಗೆ ಉಚಿತವಾಗಿ ಔಷಧಿ ಕೊಡುವ ನೀತಿಯನ್ನು ರೂಪಿಸಬೇಕಾಗುತ್ತದೆ. ತಮಿಳುನಾಡಿನ ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಕಿಡ್ನಿಯನ್ನು ಕಸಿ ಮಾಡಿಸಿಕೊಂಡ ರೋಗಿಗಳಿಗೆ ಉಚಿತವಾಗಿ ಔಷಧ ನೀಡಲಾಗುತ್ತಿದೆ. ಇಂತಹ ಪ್ರಯತ್ನದ ಬಗ್ಗೆ ಕರ್ನಾಟಕ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡುತ್ತಿರುವುದು ಒಳ್ಳೆಯ ಕ್ರಮ. ಈ ಬಗ್ಗೆ ಕೇಂದ್ರ ಸರ್ಕಾರ ಸಹ ಗಮನ ಹರಿಸಿ, ಇಂತಹ ಬಡ ರೋಗಿಗಳಿಗೆ ಉಚಿತ ಔಷಧೋಪಚಾರ ದೊರಕುವಂತೆ ನೋಡಿಕೊಂಡರೆ ಅನುಕೂಲವಾಗಲಿದೆ.

ಏನೇ ಆಗಲಿ ಕಾಲಕಾಲಕ್ಕೆ ತಪಾಸಣೆ ಮಾಡಿಸಿಕೊಂಡು ಕಿಡ್ನಿಯಲ್ಲಿ ಸಣ್ಣ–ಪುಟ್ಟ ಲೋಪದೋಷ ತೊಂದರೆ ಕಂಡುಬಂದಾಗಲೇ ಅದನ್ನು ಸರಿಪಡಿಸಿಕೊಳ್ಳುವುದು ತುಂಬಾ ಒಳ್ಳೆಯ ಕ್ರಮ. ರೋಗ ಬಂದ ಅನಂತರ ಪರಿತಪಿಸುವುದಕ್ಕೆ ಬದಲಾಗಿ ರೋಗ ಬಾರದಂತೆ ಆರೋಗ್ಯ ಕಾಪಾಡಿಕೊಳ್ಳುವುದೇ ಉತ್ತಮ ಮಾರ್ಗ. ಧೂಮಪಾನ, ಮದ್ಯಪಾನ ಮುಂತಾದ ದುಶ್ಚಟಗಳಿಂದ ದೂರವಿರುವುದು ನಿಯಮಿತವಾಗಿ ವಾಕ್ ಮಾಡುವುದು, ಹೆಚ್ಚು ಹಣ್ಣು, ತರಕಾರಿ ಸೇವನೆ, ಸರಳ ಜೀವನ ಕ್ರಮ ಉತ್ತಮ ವಿಧಾನಗಳು. ಅತಿಯಾದ ಸಕ್ಕರೆಯ ಸೇವನೆ, ಸ್ಥೂಲ ಶರೀರ, ಉಪ್ಪಿನ ಸೇವನೆ, ವಿಶೇಷವಾಗಿ ಬಿ.ಪಿ, ಅತಿಯಾಗದಂತೆ ಒತ್ತಡಮುಕ್ತ ಜೀವನವಿಧಾನ ರೂಪಿಸಿಕೊಳ್ಳಬೇಕು ಎಂದು ಡಾ. ಸುಂದರ್ ಶಂಕರನ್ ಅವರು ಕಿವಿಮಾತು ಹೇಳುತ್ತಾರೆ.

▪ ಸಂದರ್ಶನ: ಕೆ.ಎಸ್. ರಾಜಮನ್ನಾರ್



### ಮಾತೃಋಣ ದೊಡ್ಡದು

"ನೋಡಿ ನಮ್ಮ ತಾಯಿಗೆ ನಾವು ನಾಲ್ವರು ಗಂಡ ಮಕ್ಕಳು. ಮೂವರು ಚೆನ್ನಾಗಿದ್ದಾರೆ. ನನಗೆ ಮಾತ್ರ ಕಿಡ್ನಿ ಸಮಸ್ಯೆ ಕಾಣಿಸಿಕೊಂಡಿತ್ತು. ಆ ಸಮಯದಲ್ಲಿ ನನ್ನ ಸ್ಥಿತಿ ಯಾವ ಶತ್ರುವಿಗೂ ಬೇಡ. ಆಗ ನನಗೆ ಕಿಡ್ನಿ ಕೊಡಲು ನನ್ನ ತಾಯಿ ಮುಂದೆ ಬಂದರು. ಶ್ರೀದೇವಿ ಆಸ್ಪತ್ರೆ ನನಗೆ ನನ್ನ ತಾಯಿಯ ಕಿಡ್ನಿಯನ್ನು ಅಳವಡಿಸಿತು. ನನ್ನ ತಾಯಿಗೆ ನನ್ನನ್ನು ಬಿಟ್ಟು ಇನ್ನು ಮೂವರು ಗಂಡು ಮಕ್ಕಳಿದ್ದರು. ನಮ್ಮ ತಾಯಿ 'ಇವನು ಹೋದರೆ ಹೋಗಲಿ ಎನ್ನಲಿಲ್ಲ. ತನ್ನ ಪ್ರಾಣವನ್ನು ಪಣವಾಗಿಟ್ಟು ನನಗೆ ಪ್ರಾಣದಾನ ಮಾಡಿದರು. ತಾಯಿಗೆ ಎಷ್ಟೇ ಮಕ್ಕಳಿರಲಿ, ಆಕೆ ನೋಟ ತನ್ನ ಅಸಹಾಯಕ ಮಗುವಿನ ಮೇಲಿರುತ್ತದೆ' ಎನ್ನುವುದಕ್ಕೆ ನನ್ನ ತಾಯಿಯೇ ಸಾಕ್ಷಿ. ಮಾತೃಋಣ ದೊಡ್ಡದು. ಅದನ್ನು ತೀರಿಸುವುದು ಅಸಾಧ್ಯ. ಕೇವಲ ಮೌನದಿಂದ ಆ ಮಾತೃಶಕ್ತಿಗೆ ಶರಣಾಗುವುದು ನನ್ನ ಕರ್ತವ್ಯ. ಈ ಸಂದರ್ಭದಲ್ಲಿ ಡಾ. ಯಶವಂತ್ ಮತ್ತು ಡಾ. ಮಂಜುನಾಥ್ ಅವರು ನನ್ನನ್ನು ನೋಡಿಕೊಂಡ ರೀತಿ ತುಂಬಾ ಮನಮಟ್ಟುವಂತೆ ಇತ್ತು. ಅವರೇ ನನಗೆ ಆಧಾರಸ್ತಂಭವಾಗಿದ್ದರು."

ತಾಯಿಯಿಂದ ಕಿಡ್ನಿ ಪಡೆದ ಸಲ್ಮಾನ್‌ಖಾನ್ ಭಾವುಕರಾಗಿ ನುಡಿದರು.

### ಫಲಾನುಭವಿಯ ಅನುಭವ

"ಎರಡು ವರ್ಷಗಳಿಂದ ಕಿಡ್ನಿ ಸಮಸ್ಯೆಯಿಂದಾಗಿ ಪದೆ–ಪದೇ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದೆ ಕಡೆಗೆ ಒಂದು ದಿನ ಡಾ. ಯಶವಂತ್ ಬಳಿ ಸಮಸ್ಯೆ ಹೇಳಿಕೊಂಡಾಗ ಅವರು ಶ್ರೀದೇವಿ ಆಸ್ಪತ್ರೆಯಲ್ಲಿ ಕಿಡ್ನಿ ಆಪರೇಷನ್ ಮಾಡುವುದಾಗಿ ಹೇಳಿದರು. ಕಡೆಗೆ ನನ್ನ ತಂದೆ ನಂಜೇಗೌಡ ಕಿಡ್ನಿ ದಾನ ಮಾಡಲು ಮುಂದೆ ಬಂದರು. ಡಾ. ಯಶವಂತ್ ಮತ್ತು ಅವರ ತಂಡದಿಂದ ಆಪರೇಷನ್ ಯಶಸ್ವಿಯಾಗಿದೆ. ಈಗ ನಾನು ಎಲ್ಲರಂತೆ ಆರೋಗ್ಯವಾಗಿದ್ದೇನೆ. ಏನು ತಿನ್ನುವಂತಿಲ್ಲ, ಕುಡಿಯುವಂತಿಲ್ಲ ಎಂದು ಪ್ರತಿಯೊಂದಕ್ಕೂ ನಿರ್ಬಂಧವಿತ್ತು. ಈಗ ನೀರು ಕುಡಿಯುತ್ತೇನೆ. ಅದೇ ರೀತಿ ಬೇಕಾದ ತಿಂಡಿ–ತಿನಿಸು, ಆಹಾರ ಪದಾರ್ಥ ತಿನ್ನಲು ಸಮಸ್ಯೆಯಿಲ್ಲ. ಒಟ್ಟು 12 ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಈಗಲೂ ಅದೇ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ ಮುಂದುವರಿಸುತ್ತಿದ್ದೇನೆ. ನಗುಮುಖದಿಂದ ಬಂದಿದ್ದು ಅದೇ ನಗುವಿನೊಂದಿಗೆ ಮನೆಗೆ ಬಂದಿದ್ದೇನೆ"

– ಮಧುಗಿರಿ ನಾಗರಾಜ್

ವಿಶ್ವ ಅಂಗಾಂಗ ದಾನದ ದಿನಾಚರಣೆ

# ಕಿಡ್ನಿ ಟ್ರಾನ್ಸ್‌ಪ್ಲಾಂಟ್‌ಗೆ ಗುಣಮಟ್ಟದ ಚಿಕಿತ್ಸೆ

**ಡಾ. ಯಶವಂತ್ ಗಂಗಯ್ಯ**

"ಹೆಚ್ಚುತ್ತಿರುವ ಡಯಾಬಿಟಿಸ್ಸಿನಿಂದ ಬಹಳಷ್ಟು ಜನರಲ್ಲಿ ಅದರಲ್ಲೂ ಇಂದಿನ ಯುವಕ, ಯುವತಿಯರಲ್ಲಿ ಕಿಡ್ನಿಯ ವೈಫಲ್ಯದ ಸಮಸ್ಯೆ ಕಾಣಿಸುತ್ತಿದೆ. ಆದ್ದರಿಂದ ಸಕ್ಕರೆ ಕಾಯಿಲೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡರೆ, ಹೆಚ್ಚಿನ ಕಾಳಜಿ ವಹಿಸಿದರೆ ಇಂತಹ ಅನೇಕ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರ ಕಂಡುಕೊಳ್ಳಬಹುದು."

ಪ್ರತಿನಿತ್ಯ ನನ್ನ ಬಳಿ ಹತ್ತಾರು ಡಯಾಲಿಸಿಸ್ ರೋಗಿಗಳು ಬರುತ್ತಾರೆ. ಸಮಸ್ಯೆಯಿಂದ ಹೊರ ಬಂದು ಸಹಜ ಜೀವನ ನಡೆಸಲು ಕಿಡ್ನಿ ಆಪರೇಷನ್ ಮಾಡಿಸಿಕೊಳ್ಳುವಂತೆ ಅವರಿಗೆ ಸಲಹೆ ನೀಡಲಾಗುವುದು. ಅದೇ ರೀತಿ ಕಳೆದ ಮೂರು ನಾಲ್ಕು ತಿಂಗಳ ಅವಧಿಯಲ್ಲಿ ತುಮಕೂರಿನ ಶ್ರೀದೇವಿ ಆಸ್ಪತ್ರೆಯಲ್ಲಿ ಮೂವರು ರೋಗಿಗಳಿಗೆ ಕಿಡ್ನಿ ಟ್ರಾನ್ಸ್‌ಪ್ಲಾಂಟ್ (ಆಪರೇಷನ್) ಮಾಡಿದ್ದು ಅವರೆಲ್ಲರೂ ಆರೋಗ್ಯವಾಗಿದ್ದಾರೆ. ಆಪರೇಷನ್ ಸಕ್ಸಸ್ ಆಗಿದೆ ಎಂದು ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ವಿವರಿಸಿದ್ದಾರೆ.

ಮಧುಗಿರಿಯ 22 ವರ್ಷದ ಸಲ್ಮಾನ್ ಖಾನ್, 45 ವರ್ಷದ ನಾಗರಾಜ್, ಹಾಗೂ 22 ವರ್ಷದ ಯುವತಿಗೆ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿದ್ದು ಅವರೆಲ್ಲರೂ ಈಗ ಎಂದಿನಂತೆ ಸಹಜ ಜೀವನ ನಡೆಸುತ್ತಿದ್ದಾರೆ. ಡಯಾಲಿಸಿಸ್ ತಾತ್ಕಾಲಿಕ ವ್ಯವಸ್ಥೆ. ಅದಕ್ಕೆ ಬದಲಾಗಿ ಕಿಡ್ನಿ ಟ್ರಾನ್ಸ್‌ಪ್ಲಾಂಟ್ (ಆಪರೇಷನ್) ಮಾಡಿಸಿಕೊಳ್ಳುವುದೇ ಉತ್ತಮವಾದ ಮಾರ್ಗ. ಇಲ್ಲದೇ ಹೋದಲ್ಲಿ ವಾರಕ್ಕೆ ಎರಡು, ಮೂರು ಸಲ ಹೀಗೆ ಜೀವನಪರ್ಯಂತ ಆಸ್ಪತ್ರೆಗೆ ಬಂದು ಡಯಾಲಿಸಿಸ್ ಮಾಡಿಸಿಕೊಳ್ಳಬೇಕು. ಆಮೇಲೆ ಹೆಚ್ಚು ನೀರು ಕುಡಿಯುವಂತಿಲ್ಲ. ಬೇಕಾದ ಆಹಾರ ಪದಾರ್ಥಸೇವನೆ ಸಾಧ್ಯವಾಗುವುದಿಲ್ಲ. ಈ ಕಾರಣಕ್ಕೆ ನೋಡುವುದಾದರೆ ಡಯಾಲಿಸಿಸ್‌ಗಿಂತ ಟ್ರಾನ್ಸ್‌ಪ್ಲಾಂಟ್ ಹೆಚ್ಚು ಸಮಂಜಸ. ಆರೋಗ್ಯಕರ.



ಯಾವುದೇ ಆಹಾರದ ಕಟ್ಟುಪಾಡು ಇರುವುದಿಲ್ಲ. ಮೇಲಾಗಿ ಅಂತಹ ರೋಗಿ ತನ್ನ ಕೆಲಸ ತಾನು ಮಾಡಿಕೊಂಡು ಆರಾಮವಾಗಿ ಜೀವನ ನಿರ್ವಹಣೆ ಮಾಡಬಹುದು. ಇನ್ನು ಹಣಕಾಸಿನ ವಿಚಾರವಾಗಿ ಹೇಳುವುದಾದರೆ ಆಪರೇಷನ್ ಮಾಡಿಸಿಕೊಳ್ಳುವುದಕ್ಕೂ ಡಯಾಲಿಸಿಸ್ ಮೂಲಕ ಜೀವನ ಕಳೆಯುವುದಕ್ಕೂ ಹೆಚ್ಚು ವ್ಯತ್ಯಾಸವಿರುವುದಿಲ್ಲ. ಟ್ರಾನ್ಸ್‌ಪ್ಲಾಂಟ್ ಮಾಡಿದ ಅನಂತರ ಜೀವನಪೂರ್ತಿ ಔಷಧೋಪಚಾರ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಮೊದಲ ವರ್ಷ ಔಷಧಕ್ಕೆ 10ರಿಂದ 12 ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಎರಡನೇ ವರ್ಷದಲ್ಲಿ 8ರಿಂದ 10ಸಾವಿರ ರೂ. ಮೂರು, ನಾಲ್ಕು ವರ್ಷಗಳ ಅನಂತರ ಜೀವನಪರ್ಯಂತ ತಿಂಗಳಿಗೆ ಸರಾಸರಿ 5 ಸಾವಿರ ರೂ. ವೆಚ್ಚವಾಗಲಿದೆ. ಜೋಡಣೆಯಾದ ಕಿಡ್ನಿ ಎಷ್ಟು ವರ್ಷ ಕೆಲಸ ಮಾಡುತ್ತದೆ ಎಂಬುದರ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ. ಇದು ವ್ಯಕ್ತಿಯ ಆರೋಗ್ಯದ ಮೇಲೆ ಅವಲಂಬಿತವಾಗಿರುತ್ತದೆ. ಇನ್ನು ಬಿಡಿಸಿ ಹೇಳಬೇಕೆಂದರೆ 100 ಜನಕ್ಕೆ ಟ್ರಾನ್ಸ್‌ಪ್ಲಾಂಟ್ ಮಾಡಿದರೆ ಮೊದಲ ವರ್ಷ 95ರಿಂದ 98 ಜನರ ಕಿಡ್ನಿ ಚೆನ್ನಾಗಿ ಕೆಲಸ ಮಾಡುತ್ತದೆ. ಮೂರನೆಯ ವರ್ಷಕ್ಕೆ ಹೋಲಿಸಿದರೆ 96 ರಿಂದ 97ರಷ್ಟು, ಐದನೆಯ ವರ್ಷ 93 ರಿಂದ 95 ರಷ್ಟು, 10ನೆಯ ವರ್ಷದಲ್ಲಿ 85 ರಿಂದ 90 ಜನಕ್ಕೆ ಅಳವಡಿಸಿದ ಕಿಡ್ನಿ ಸರಿಯಾಗಿ ಕೆಲಸ ಮಾಡುತ್ತದೆ ಎಂದು ನಿಖರವಾಗಿ ಹೇಳಬಹುದು.

**ಕಿರು ಪರಿಚಯ:**
**ಡಾ. ಯಶವಂತ್ ಗಂಗಯ್ಯ ಅವರು ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದರು. ಕೋಲಾರದ ದೇವರಾಜ್ ಅರಸು ವೈದ್ಯಕೀಯ ಕಾಲೇಜಿನಲ್ಲಿ ಎಂ.ಡಿ. ಪದವಿ. ಅನಂತರ ಚೆನ್ನೈನ ಅಪೋಲೊ ಆಸ್ಪತ್ರೆಯಲ್ಲಿ ಮೂರು ವರ್ಷ ನೆಫ್ರಾಲಜಿ ಕೋರ್ಸ್ ಮುಗಿಸಿ, ನಂತರ ಮಣಿಪಾಲ್ ಆಸ್ಪತ್ರೆಯಲ್ಲಿ ಮೂತ್ರಪಿಂಡತಜ್ಞರಾಗಿ ಮೂರು ವರ್ಷ ಕೆಲಸ ಮಾಡಿದ್ದಾರೆ. ತುಮಕೂರಿನವರೇ ಆಗಿದ್ದು ಕಳೆದ ಆರುತಿಂಗಳಿಂದ ಶ್ರೀದೇವಿ ಆಸ್ಪತ್ರೆಯಲ್ಲಿ ಮೂತ್ರಪಿಂಡ ತಜ್ಞರಾಗಿ ಕೆಲಸ ಮಾಡುತ್ತಿದ್ದಾರೆ.**

ಒಬ್ಬರು ಇಬ್ಬರಿಗೆ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಂಡವರು ಇತ್ತೀಚೆಗೆ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಿದೆ. ಎಲ್ಲದಕ್ಕೂ ಇತಿ–ಮಿತಿ ಇರುತ್ತದೆ. ಒಬ್ಬರಿಗೆ ಕಿಡ್ನಿ ಸರಿ ಹೊಂದದೇ ಕೆಲಸ ಮಾಡುವುದು ತಾತ್ಕಾಲಿಕವಾಗಿ ನಿಂತು ಹೋಗಬಹುದು. ಇದರಿಂದಾಗಿ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಂಡವರು ಸಹ ಕೆಲವೊಮ್ಮೆ ಡಯಾಲಿಸಿಸ್‌ಗೆ ಒಳಪಡುವ ಸಾಧ್ಯತೆ ಬರಬಹುದು. ಇದು ವ್ಯಕ್ತಿಯಿಂದ ವ್ಯಕ್ತಿಗೆ ಅವರ ವೈಯಕ್ತಿಕ ಆರೋಗ್ಯದ ಮೇಲೆ ನಿರ್ಧಾರವಾಗಲಿದೆ. ಆದರೆ ಇದು ಬಹಳ ಅಪರೂಪ. ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಳ್ಳುವವರ ಪೈಕಿ ನೂರಕ್ಕೆ 90 ಜನ ಡಯಾಬಿಟಿಕ್ ರೋಗಿಗಳೇ ಆಗಿರುತ್ತಾರೆ. ಬಿಪಿ, ಶುಗರ್ ಯಾವುದೇ ಸಮಸ್ಯೆ ಇಲ್ಲ ಎಂದವರಿಗೆ ಸಹಜವಾಗಿ ಕಿಡ್ನಿ ಸಮಸ್ಯೆಯೂ ಬರುವುದಿಲ್ಲ (creatinine) ಮಟ್ಟ 1.5 ಮಿತಿಯಲ್ಲಿದ್ದರೆ ಅವರಿಗೆ ಟ್ರಾನ್ಸ್‌ಪ್ಲಾಂಟ್ ಮಾಡುವ ಆವಶ್ಯಕತೆ ಬರುವುದಿಲ್ಲ.

ಕಿಡ್ನಿ ವೈಫಲ್ಯದಲ್ಲಿ ಎರಡು ವಿಧ. ಒಂದು ತಾತ್ಕಾಲಿಕ. ಇನ್ನೊಂದು ದೀರ್ಘಕಾಲಿಕ. ತಾತ್ಕಾಲಿಕ ಸಮಸ್ಯೆ ಇರುವವರಿಗೆ ಔಷಧಗಳ ಮೂಲಕ ಬಹಳ ಬೇಗ ಸರಿಪಡಿಸಬಹುದು. ಆದರೆ (creatinine) ಮಟ್ಟ 1.5ಕ್ಕಿಂತ ಹೆಚ್ಚಾದರೆ ಮಾತ್ರ ಕಿಡ್ನಿ ಕೆಲಸ ಮಾಡುವುದಿಲ್ಲ. ಆಗ ಅನಿವಾರ್ಯವಾಗಿ ಆಪರೇಷನ್ ಮಾಡಬೇಕಾಗುತ್ತದೆ.

ಇನ್ನು ಶ್ರೀದೇವಿ ಆಸ್ಪತ್ರೆಯಲ್ಲಿ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಲು ಬೇಕಾದ ಎಲ್ಲ ರೀತಿಯ ಮೂಲಸೌಲಭ್ಯಗಳಿವೆ. ಪ್ರತ್ಯೇಕ ಬ್ಲಡ್ ಬ್ಯಾಂಕ್ ಹಾಗೂ ನುರಿತ ವೈದ್ಯಕೀಯ ಮತ್ತು ತರಬೇತಿ ಪಡೆದ ಪ್ಯಾರಾಮೆಡಿಕಲ್ ಸಿಬ್ಬಂದಿ ಹಾಗೂ ಸುಸಜ್ಜಿತ ಆಪರೇಷನ್ ಥಿಯೇಟರ್‌ಗಳಿವೆ. ಮೇಲಾಗಿ ಅಂಗಾಂಗ ಜೋಡಣೆಗೆ ಸರ್ಕಾರದ ಅನುಮತಿ ಪಡೆಯಲಾಗಿದೆ. ಹೀಗಾಗಿ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಲಭ್ಯವಿರುವುದರಿಂದ ತುಮಕೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಯ ಜನರು ಇದರ ಸೌಲಭ್ಯ ಪಡೆದುಕೊಳ್ಳಬೇಕೆಂದು ಡಾ. ಯಶವಂತ ಮನವಿ ಮಾಡಿದ್ದಾರೆ.

# ದೇವರು ಕೊಟ್ಟ ಅಮೂಲ್ಯ ವರ

**ಡಾ. ಎಸ್. ಬಿ. ಮಂಜುನಾಥ್**

ತಮ್ಮ ಪ್ರೀತಿಪಾತ್ರರು ಅಂಗಾಂಗ ವೈಫಲ್ಯದಿಂದ ಬಳಲುವುದನ್ನು ಪ್ರತಿನಿತ್ಯ ನೋಡಿ ನೊಂದುಕೊಳ್ಳುವ, ಆತಂಕ ಪಡುವ, ಕೊರಗುವ ಮನಸ್ಸುಗಳಿಗೆ, ಜೀವಿಗಳಿಗೆ ಅಂಗಾಂಗ ದಾನ ಎಂಬುದು ದೇವರು ಕೊಟ್ಟ ಅಮೂಲ್ಯ ವರ ಮತ್ತು ಸಾವಿನ ನಂತರ ಸುಟ್ಟು ಬೂದಿಯಾಗುವ ಇಲ್ಲವೇ ಮಣ್ಣಲ್ಲಿ, ಮಣ್ಣಾಗಿ ಕೊಳೆತು ಹೋಗುವುದಕ್ಕೆ ಬದಲಾಗಿ ಇನ್ನೊಬ್ಬರ ಬಾಳಿಗೆ ಬೆಳಕಾಗಿ, ಮನುಷ್ಯ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುವುದಕ್ಕೆ ಇದರ ಉಪಯೋಗವನ್ನು ಎಷ್ಟು ಭಾರಿ ಹೇಳಿದರೂ ಸಾಲದು. ಜನರು ವಿಶಾಲ ಮನೋಭಾವ ಬೆಳೆಸಿಕೊಂಡು ಮೌಢ್ಯ ಮತ್ತು ಗೊಡ್ಡು ಸಂಪ್ರದಾಯದಿಂದ ಹೊರಬಂದು ಅಂಗಾಂಗ ದಾನ ನೋಂದಣಿ ಪ್ರಕ್ರಿಯೆಗೆ ಮುಂದಾಗಬೇಕು. ಭಾರತ ಬದಲಾಗಬೇಕಿರುವುದು, ಮಾದರಿಯಾಗಬೇಕಿರುವುದು ಇಂತಹ ಆದರ್ಶಗಳಿಂದಲೇ. ಇದಕ್ಕೆ ಪ್ರತಿಯೊಬ್ಬರು ನೀರೆರೆದು, ಪ್ರೋತ್ಸಾಹಿಸಬೇಕು.



ಅಂಗಾಂಗ ದಾನ ಮತ್ತು ಮೂತ್ರಪಿಂಡ ಕಸಿ ಮಾಡಲು ಕರ್ನಾಟಕ ಸರ್ಕಾರದಿಂದ, ಪ್ರಮಾಣ ಪತ್ರ ಮತ್ತು ಅನುಮೋದನೆ ಪಡೆದುಕೊಂಡ ಆಸ್ಪತ್ರೆಗಳಲ್ಲೊಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ. ಪರಿಣಿತ ವೈದ್ಯರ ತಂಡ ಒಂದಲ್ಲ, ಎರಡು ಬಾರಿ ಪರೀಕ್ಷೆ ಮಾಡಿ ಬ್ರೈನ್ ಡೆಡ್ ಆಗಿದೆ ಎಂದು ಅಧಿಕೃತವಾಗಿ ಘೋಷಣೆ ಮಾಡಿದ ನಂತರ ಅಂತಹ ವ್ಯಕ್ತಿಗಳಿಂದ ಎರಡು ಕಣ್ಣು ಎರಡು ಮೂತ್ರಪಿಂಡ, ಹೃದಯ, ಹೃದಯದ ಕವಾಟಗಳು ಲಿವರ್ ಇದೆಲ್ಲವನ್ನು ತೆಗೆದು ಅಗತ್ಯ ಇರುವವರಿಗೆ ಕಸಿ ಮಾಡಲು ಬೇಕಾದ ಅನುಮತಿಯನ್ನೂ ಪಡೆಯಲಾಗಿದೆ.

ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ಬಹಳಷ್ಟು ರೋಗಿಗಳು ಆಸ್ಪತ್ರೆಗೆ ಪ್ರತಿನಿತ್ಯ ಬರುತ್ತಿದ್ದು ಅದಕ್ಕೆ ಸಂಬಂಧಪಟ್ಟ ರೀನಲ್ ಟ್ರಾನ್ಸ್ ಪ್ಲಾಂಟ್ ಅಂದರೆ ಮೂತ್ರಪಿಂಡ ಕೆಲಸಕ್ಕೆ ಪರ್ಯಾಯವಾಗಿ ಕೆಲಸ ಮಾಡುವವಂತಹ ಚಿಕಿತ್ಸೆ. ಅದರಲ್ಲಿ ಸೂಕ್ತ ರೋಗಿಗಳನ್ನು ನಾವು ಆಯ್ಕೆ ಮಾಡಿಕೊಂಡು ಅವರಿಗೆ ಎಲ್ಲಾ ವಿಚಾರಗಳನ್ನು ತಿಳಿಸಿ ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಗುತ್ತಿದೆ. ಇದುವರೆಗೆ ಕಳೆದ ಐದು ತಿಂಗಳ ಅವಧಿಯಲ್ಲಿ ಇದುವರೆಗೆ ಇಂತಹ ಮೂರು ಮೂತ್ರಪಿಂಡ ಕಸಿ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ. ಆಸ್ಪತ್ರೆಯಲ್ಲಿ ಕಿಡ್ನಿ ಕಸಿ ಮಾಡಲು ಬೇಕಾದಂತಹ ನುರಿತ ವೈದ್ಯರು ಶಸ್ತ್ರ ಚಿಕಿತ್ಸಕರ ತಂಡ, ಅರಿವಳಿಕೆ ವೈದ್ಯರು ಶುಶ್ರೂಷಕರ ತಂಡ, ತೀವ್ರ ನಿಗಾ ಘಟಕದ ಸೌಲಭ್ಯವಿದೆ.

ಮೊದಲು ಮೂತ್ರಪಿಂಡವನ್ನು ರೋಗಿಯ ಕುಟುಂಬದ ಸದಸ್ಯರಲ್ಲಿ ಯಾರಿಂದ ತೆಗೆದುಕೊಳ್ಳಬಹುದು ಮತ್ತು ರೋಗಿಗೆ ಜೋಡಿಸಬಹುದು ಎಂಬುದನ್ನು ಬೇರೆ, ಬೇರೆ ವೈದ್ಯಕೀಯ ಪರೀಕ್ಷೆಗಳ ಮೂಲಕ ಪರಿಶೀಲನೆ ಮಾಡಲಾಗುತ್ತದೆ. ಇದಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುವುದರ ಜೊತೆಗೆ ಸಾಕಷ್ಟು ವೈದ್ಯಕೀಯ ಪರೀಕ್ಷೆಗಳನ್ನು ನುರಿತ ವೈದ್ಯರ ನೇತೃತ್ವದಲ್ಲಿ ಮಾಡಿ ಆನಂತರ ಆಪರೇಷನ್ ಮಾಡುವ ತೀರ್ಮಾನಕ್ಕೆ ಬರಲಾಗುವುದು. ಒಬ್ಬ ವ್ಯಕ್ತಿಯಿಂದ ರೋಗಿಗೆ ಮೂತ್ರಪಿಂಡ ಕಸಿ ಮಾಡುವುದಕ್ಕೆ ಬೇಕಾದ ಅರ್ಹತಾ ಪರೀಕ್ಷೆ ನಡೆಸಿ ಶಸ್ತ್ರಚಿಕಿತ್ಸೆಗೆ ಸಿದ್ದ ಮಾಡಿಕೊಳ್ಳುವುದಕ್ಕೆ ಕನಿಷ್ಠ 20 ದಿನಗಳ ಸಮಯ ಬೇಕಾಗುತ್ತದೆ. ಇದಕ್ಕಾಗಿ ಹಲವು ರೀತಿಯ ರಕ್ತ ಪರೀಕ್ಷೆ ಮಾಡಬೇಕು ಮತ್ತು ಇದಕ್ಕೆ ಸರ್ಕಾರದ ಒಪ್ಪಿಗೆ ಕಡ್ಡಾಯವಾಗಿದೆ. ಸರ್ಕಾರದಿಂದ ಅನುಮೋದನೆ ಪಡೆದ ನಂತರವಷ್ಟೇ ಕಸಿ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತದೆ. ಶಸ್ತ್ರ ಚಿಕಿತ್ಸೆಗೆ ಮೊದಲು ನಡೆಸಬಹುದಾದ ಹಲವು ಮ್ಯಾಚಿಂಗ್ ಪರೀಕ್ಷೆಗಳಿಗೆ ಕನಿಷ್ಠ 60 ರಿಂದ 70 ಸಾವಿರ ರೂಪಾಯಿ ಖರ್ಚು ಬರುತ್ತದೆ. ಮೂತ್ರಪಿಂಡ ಕಸಿ ಶಸ್ತ್ರ ಚಿಕಿತ್ಸೆಗೆ 5 ಲಕ್ಷ ರೂಪಾಯಿ ವೆಚ್ಚವಾಗಲಿದೆ. ಶಸ್ತ್ರಚಿಕಿತ್ಸೆ ಮುಗಿದ ನಂತರ ನಿಯಮಿತವಾಗಿ ವಾರಕ್ಕೆ ಒಂದು ಅಥವಾ ಎರಡು ಬಾರಿ ಆರೋಗ್ಯದ ತಪಾಸಣೆಗೆ ಆಸ್ಪತ್ರೆಗೆ ಬರಬೇಕು. ಕ್ರಮೇಣ ಬರು ಬರುತ್ತಾ ವಾರಕ್ಕೆ ಒಂದು ಬಾರಿ ತಿಂಗಳಿಗೆ ಒಂದು ಬಾರಿ ಭೇಟಿ ನೀಡಬೇಕು. ಶಸ್ತ್ರ ಚಿಕಿತ್ಸೆ ಮುಗಿದ ನಂತರವೂ ಜೀವನ ಪರ್ಯಂತ ಔಷಧ ಸೇವನೆ ಕಡ್ಡಾಯವಾಗಿರಲಿದೆ. ಮುಂದಿನ ದಿನಗಳಲ್ಲಿ ಕಿಡ್ನಿ ಶಸ್ತ್ರ ಚಿಕಿತ್ಸೆಯ ಸಂಖ್ಯೆ ಹೆಚ್ಚಿಸುವ ಯೋಜನೆ ಹಮ್ಮಿಕೊಂಡಿದ್ದೇವೆ. ಈ ಸೇವೆಯನ್ನು ಎಲ್ಲಾ ಕಡೆ ವಿಸ್ತರಣೆ ಮಾಡುವ, ತುಮಕೂರು ಜಿಲ್ಲೆ ಮತ್ತು ಜಿಲ್ಲೆಯ ಹೊರಗೆ ಶಸ್ತ್ರಚಿಕಿತ್ಸೆ ಮಾಡುವ ಯೋಜನೆ ರೂಪಿಸಲಾಗಿದೆ. ಎರಡನೆಯದು ಸಾವಿನ ನಂತರ ಕಿಡ್ನಿ, ಇನ್ನಿತರೆ ಅಂಗಾಂಗಗಳನ್ನು ಕಸಿ ಮಾಡುವ ಯೋಜನೆಯನ್ನು ದೊಡ್ಡ ಮಟ್ಟದಲ್ಲಿ ಕೈಗೊಳ್ಳಲು ತೀರ್ಮಾನಿಸಿದ್ದು, ಇದಕ್ಕೆ ಆಡಳಿತ ಮಂಡಳಿ ಒಪ್ಪಿಗೆ ನೀಡಿ ಎಲ್ಲ ರೀತಿಯ ಸಹಾಯ–ಸಹಕಾರ ನೀಡುತ್ತಿದೆ. ಕಡಿಮೆ ವೆಚ್ಚದಲ್ಲಿ ಅತ್ಯಂತ ಗುಣಮಟ್ಟದ ಚಿಕಿತ್ಸೆಯನ್ನು ಶ್ರೀದೇವಿ ಆಸ್ಪತ್ರೆಯಲ್ಲಿ ನೀಡಲಾಗುತ್ತಿದೆ. ಇದರ ಪ್ರಯೋಜನವನ್ನು ಜಿಲ್ಲೆ ಹಾಗೂ ರಾಜ್ಯದ ಜನತೆ ಪಡೆದುಕೊಳ್ಳಬೇಕು.



**ಕಿರು ಪರಿಚಯ:**
**ಡಾ. ಎಸ್. ಬಿ. ಮಂಜುನಾಥ್ ಹುಟ್ಟಿದ್ದು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೋಕು, ಹುಳಿಯಾರಿನಲ್ಲಿ. ಬೆಂಗಳೂರಿನ ಪ್ರತಿಷ್ಠಿತ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ತದನಂತರ ಮಂಗಳೂರಿನ ಎ.ಜೆ. ಮೆಡಿಕಲ್ ಕಾಲೇಜಿನಲ್ಲಿ 2015 ರಿಂದ 18 ರವರೆಗೆ ಎಂ.ಎಸ್. ಜನರಲ್ ಸರ್ಜರಿ. ಇದಾದ ಬಳಿಕ ಕೇರಳ ಮತ್ತು ರಾಜ್ಯದ ಹಾಸನದ ಮೆಡಿಕಲ್ ಕಾಲೇಜಿನಲ್ಲಿ ಜನರಲ್ ಸರ್ಜನ್, ಸೀನಿಯರ್ ರೆಸಿಡೆಂಟ್ ವೈದ್ಯರಾಗಿ ಕೆಲಸ ಮಾಡಿದ್ದಾರೆ. 2020ನೇ ಸಾಲಿನಲ್ಲಿ ಎಂಸಿಎಚ್ ಅಂದರೆ ಸೂಪರ್ ಸ್ಪೆಷಾಲಿಟಿ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದು ಬೆಂಗಳೂರಿನ ವೈದ್ಯಕೀಯ ಮಹಾವಿದ್ಯಾಲಯ ನೆಫ್ರೋ ಯೂರಾಲಜಿ ಸಂಸ್ಥೆಯಲ್ಲಿ ಎಂಸಿಹೆಚ್ ಯೂರಾಲಜಿ ಕೋರ್ಸ್ ಮುಗಿಸಿ ಕಳೆದ ಜನವರಿಯಿಂದ ಪ್ರತಿಷ್ಠಿತ ತುಮಕೂರು ಶ್ರೀದೇವಿ ಆಸ್ಪತ್ರೆಯಲ್ಲಿ ಯುರಾಲಜಿ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.**

## ನೆನಪಿನಲ್ಲಿಡಬೇಕಾದ ಮಾತು




“ಬುದ್ಧ ಶುದ್ಧಾಂಗವಾಗಿ ಸಮಾನತಾವಾದಿಯಾಗಿದ್ದ. ಬಿಕ್ಕುಗಳ ಸಂಘಕ್ಕೆ ಅತ್ಯಂತ ಪ್ರಜಾಸತ್ತಾತ್ಮಕವಾದ ಸಂವಿಧಾನವಿತ್ತು. ಬಿಕ್ಕುಗಳಲ್ಲಿ ಅವನೊಬ್ಬ ಬಿಕ್ಕು ಮಾತ್ರವಾಗಿದ್ದ. ಹೆಚ್ಚೆಂದರೆ ಕೇಂದ್ರ ಸಚಿವ ಸಂಪುಟದಲ್ಲಿ ಪ್ರಧಾನಮಂತ್ರಿಯಿದ್ದಂತೆ. ಅವನೆಂದೂ ಸರ್ವಾಧಿಕಾರಿಯಾಗಿರಲಿಲ್ಲ. ಧರ್ಮವೇ ಸಂಘದ ಪರಮನಾಯಕ ಎಂದು ಆತ ಹೇಳುತ್ತಿದ್ದ. ಅವನು ಸರ್ವಾಧಿಕಾರಿಯಾಗಲು ನಿರಾಕರಿಸಿದ್ದ. ತನ್ನ ಅನಂತರ ಸಂಘಕ್ಕೆ ಒಬ್ಬ ಮುಖಂಡನನ್ನು ನೇಮಿಸಲು ಬುದ್ಧ ನಿರಾಕರಿಸಿದ್ದ.

– ಡಾ. ಬಿ.ಆರ್. ಅಂಬೇಡ್ಕರ್ ಅವರ ‘ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್’ ಗ್ರಂಥದಿಂದ



# ದಾಖಲೆ ಬರೆದ ಸಾವಿರ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ

ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಹಾಗೂ ಬೆಂಗಳೂರಿನ ನಯೋನಿಕಾ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ಒಂದು ಸಾವಿರ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ನಡೆದು, ಅದರ ಅಂಗವಾಗಿ ತುಮಕೂರಿನ ಶ್ರೀದೇವಿ ಆಸ್ಪತ್ರೆಯಲ್ಲಿ ಆಗಸ್ಟ್ 14ರಂದು ಹೃದಯಸ್ಪರ್ಶಿ ಅಭಿನಂದನಾ ಸಮಾರಂಭವೊಂದು ಜರುಗಿತು. ನಯೋನಿಕಾ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಪ್ರಶಾಂತ್ ಅವರು ಮಾತನಾಡುತ್ತಾ “ಎಲ್ಲಾ ಸದ್ಗುಣಗಳನ್ನು ಪಡೆದ ವ್ಯಕ್ತಿಯನ್ನು ಜಗತ್ತಿನಲ್ಲಿ ಕಾಣುವುದು ತುಂಬಾ ಅಪರೂಪ. ಆತ ಧೈರ್ಯವಂತನಾಗಿರಬಹುದು, ಒಳ್ಳೆಯ ಭಾಷಣಕಾರನಾಗಿರಬಹುದು, ದುಡಿದು ದೊಡ್ಡ ಶ್ರೀಮಂತನಾಗಿರಬಹುದು. ಅವನಲ್ಲಿ ಮಾನವೀಯ ಗುಣಗಳಿಲ್ಲದಿದ್ದರೆ, ಬೇರೆಯವರ ಕಷ್ಟಕ್ಕೆ ಸ್ಪಂದಿಸುವ ಸಹೃದಯತೆ ಇಲ್ಲದಿದ್ದರೆ ಅವನಿಂದ ಸಮಾಜಕ್ಕೆ ಯಾವ ಉಪಯೋಗ? ಡಾ. ಎಂ.ಆರ್. ಹುಲಿನಾಯ್ಕರ್ ಎಲ್ಲಾ ಸದ್ಗುಣಗಳನ್ನು ಮಾತ್ರ ಪಡೆದಿಲ್ಲ, ಅವರೊಬ್ಬ ಉದಾರಿ, ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ ಶ್ರೀಯುತರು ಪರಿಪೂರ್ಣತೆ ಪಡೆದಿರುವ ಮಾನವತಾವಾದಿ. ಅವರ ಪ್ರೋತ್ಸಾಹ ಮತ್ತು ಮಾರ್ಗದರ್ಶನದಿಂದ ನಮ್ಮ ಟ್ರಸ್ಟ್ ಮತ್ತು ಶ್ರೀದೇವಿ ಆಸ್ಪತ್ರೆ ಇಂತಹ ಅದ್ಭುತ ಸಾಧನೆ ಮಾಡಿದೆ. ನಮ್ಮ ನಯೋನಿಕಾ ಟ್ರಸ್ಟ್ ರಾಜ್ಯದಲ್ಲಿ ಯಾರೊಬ್ಬರು ಕಣ್ಣಿನ ಪೊರೆಯಿಂದ ಅಂಧರಾಗಿ, ತಮ್ಮ ಬದುಕನ್ನು ಅಂಧಕಾರ ಮಾಡಿಕೊಳ್ಳಬಾರದು, ಅದರಲ್ಲೂ ಕಣ್ಣಿನ ದೋಷಕ್ಕೆ ಒಳಗಾದರೆ ಅವರ ಉಚಿತ ಚಿಕಿತ್ಸೆಗೆ ನಮ್ಮ ಟ್ರಸ್ಟ್ ಸದಾ ಸಿದ್ಧವಿರುತ್ತದೆ. ನಾವು ಇಂತಹ ಸಾಧನೆ ಮಾಡಲು ನಮಗೆ ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನೆರವು ಮುಖ್ಯವಾಗಿರುತ್ತದೆ. ಅದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿರುತ್ತೇವೆ” ಎಂದರು.




ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸುವರ್ಣಮುಖಿ ಸಂಸ್ಕೃತಿಧಾಮದ ಸಂಸ್ಥಾಪಕರಾದ ಡಾ. ಆಚಾರ್ಯ ಎಂ. ನಾಗರಾಜ್ ಅವರು “ನಾವು ಸಣ್ಣವರಿದ್ದಾಗ ಡಾ. ಎಂ.ಸಿ. ಮೋದಿ ಅವರು ಇಷ್ಟು ಪ್ರಮಾಣದಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ಈಗ ಯುವಶಕ್ತಿಯ ಪ್ರತಿನಿಧಿಯಾಗಿರುವ ನಯೋನಿಕಾ ಟ್ರಸ್ಟ್‌ನ ಪ್ರಶಾಂತ್ ಇಂತಹ ಕೆಲಸ ಮಾಡುತ್ತಿದ್ದಾರೆ. ಸಣ್ಣ ವಯಸ್ಸಿನಲ್ಲಿ ಅವರು ಮತ್ತು ಅವರ ಶ್ರೀಮತಿ ಅವರು ಮಾಡುತ್ತಿರುವ ಸಮಾಜ ಸೇವೆ ಕಂಡಾಗ ಎದೆತುಂಬಿ ಬರುತ್ತದೆ. ದೇವರು ಈ ದಂಪತಿಗಳಿಗೆ ಆರೋಗ್ಯ ಮತ್ತು ಅವರ ಆಶಯಗಳ ಅನುಷ್ಠಾನಕ್ಕೆ ಬೇಕಾದ ಸಂಪನ್ಮೂಲಗಳನ್ನು ಕೊಡಲಿ. ಭಾರತದಲ್ಲಿ ಮಾತ್ರ ಮಾನವ ಸೇವೆ ಮಾಡಲು ಅವಕಾಶ ಯಥೇಚ್ಛವಾಗಿದೆ. ನಾನು ಅಮೆರಿಕದಲ್ಲಿ ಸಾಕಷ್ಟು ಕಾಲ ಇದ್ದು ಬಂದಿದ್ದೇನೆ. ಅಲ್ಲಿಯದು ವ್ಯಾವಹಾರಿಕವಾದ ಬದುಕು. ಅಲ್ಲಿ ಬೇಗ ಜಿಗುಪ್ಸೆ ಬರುತ್ತದೆ. ಇನ್ನು ಡಾ. ಎಂ.ಆರ್. ಹುಲಿನಾಯ್ಕರ್ ನಾನು ಕಂಡ ‘ಪರ್‌ಫೆಕ್ಟ್ ಜಂಟಲ್‌ಮ್ಯಾನ್’. ಅವರಿಂದ ಕಲಿಯುವುದು ಬಹಳಷ್ಟಿದೆ. ಅವರದು ಆದರ್ಶದ ವ್ಯಕ್ತಿತ್ವ” ಎಂದು ಅಭಿಪ್ರಾಯಪಟ್ಟರು.

ಶ್ರೀದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ “ಜೀವನದಲ್ಲಿ ಸದಾಕಾಲದಲ್ಲೂ ಹಣ ಮಾಡುವುದೇ ಜೀವನದ ಉದ್ದೇಶವಾಗಿರಬಾರದು. ಹಣ ಬೇಡವೆಂದು ಯಾರೂ ಹೇಳುವುದಿಲ್ಲ. ನಿಮ್ಮ ಸಂಪಾದನೆಯಲ್ಲಿ ಶೇಕಡ ಇಂತಿಷ್ಟು ಪಾಲನ್ನು ಸಮಾಜಕ್ಕೆ ಕೊಡಿ. ನಾವು ಸಮಾಜದಿಂದ ಬಹಳಷ್ಟು ಪಡೆದಿದ್ದೇವೆ. ಸಮಾಜದ ಋಣ ನಮ್ಮ ಮೇಲಿರುತ್ತದೆ. ನಮ್ಮ ಕಾಲೇಜಿನಲ್ಲಿ ಸ್ಕಾಲರ್‌ಶಿಪ್ ಕೊಡುತ್ತೇವೆ. ಮೊದಲ ಸೆಮಿಸ್ಟಾರ್ ಅನಂತರ ಆ ಹುಡುಗರು ಅತ್ಯಂತ ಕಡಿಮೆ ವೆಚ್ಚದಲ್ಲಿ ಪದವಿ ಮುಗಿಸುತ್ತಾರೆ. ಈ ಸಂದರ್ಭದಲ್ಲಿ ಪ್ರಶಾಂತ್ ಮತ್ತು ಅವರ ಮಡದಿ ಡಾ.ಸುರೇಖಾ ಪ್ರಶಾಂತ್ ಅವರ ತ್ಯಾಗ ಮತ್ತು ಪರೋಪಕಾರದ ಮನೋಧರ್ಮವನ್ನು ಶ್ಲಾಘನೆ ಮಾಡಬೇಕಾಗಿದೆ. ಸಾವಿರ ಕಣ್ಣಿನಪೊರೆ ಉಚಿತ ಶಸ್ತಚಿಕಿತ್ಸೆ ಎಂದರೆ ಸಾಮಾನ್ಯದ ಮಾತಲ್ಲ, ನಮ್ಮ ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯ ಜೊತೆಗೆ ಪ್ರಶಾಂತ್ ದಂಪತಿಗಳು ಕೈಜೋಡಿಸಿದ ಕಾರಣ ಈ ಮಹಾನ್ ಸಾಧನೆಯಾಗಿದೆ. ಇದಕ್ಕೆ ದುಡಿದ ನಮ್ಮ ಶ್ರೀದೇವಿ ಆಸ್ಪತ್ರೆಯ ಪ್ರತಿಯೊಬ್ಬ ಸಿಬ್ಬಂದಿಯನ್ನೂ ಅಭಿನಂದಿಸುತ್ತೇನೆ. ಇದೊಂದು ಟೀಮ್ ವರ್ಕ್. ಎಲ್ಲರೂ ಕೈ ಜೋಡಿಸಿದ ಕಾರಣ ಇಂತಹ ಮಹತ್ವದ ಸಾಧನೆ ಸಾಧ್ಯವಾಗಿದೆ” ಎಂದರು.

ದಾಖಲೆಯುಕ್ತ ಕಣ್ಣಿನಪೊರೆ ಶಸ್ತ್ರಚಿಕಿತ್ಸೆಯಲ್ಲಿ ನೇತ್ರವಿಭಾಗದ ಡಾ. ಲಾವಣ್ಯ ರಮಣ ಅವರದು ಅಗ್ರಗಣ್ಯ ಪಾತ್ರ. ಇದಕ್ಕಾಗಿ ಅವರು ಪ್ರತ್ಯೇಕ ತಂಡವೊಂದನ್ನೇ ರೂಪಿಸಿದ್ದಾರೆ. ಅಗತ್ಯವಾದ ಸರ್ಜನ್‌ಗಳು ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ಮತ್ತು ರೋಗಿಗಳಿಗೆ ಸಕಲ ವ್ಯವಸ್ಥೆಗಳನ್ನು ಡಾ. ಲಾವಣ್ಯ ರಮಣ ಅವರು ಮಾಡಿದ್ದಾರೆ. ಅವರಿಗೆ ಅಭಿನಂದನೆಗಳು.

ಮಕ್ಕಳಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೂ ಪ್ರತ್ಯೇಕ ಕಾರ್ಯಕ್ರಮವನ್ನು ಎರಡು ಸಂಸ್ಥೆಗಳು ರೂಪಿಸಿ ಅನುಷ್ಠಾನ ಮಾಡುತ್ತಿವೆ.

ಶ್ರೀದೇವಿ ಶಿಕ್ಷಣ ಸಂಸ್ಥೆಯ ವತಿಯಿಂದ ಈ ಕಾರ್ಯದಲ್ಲಿ ಶ್ರಮಿಸಿ ಗಣ್ಯರಿಗೆ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಸನ್ಮಾನ ಮಾಡಿದರು. ಸಮಾರಂಭದಲ್ಲಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ರಮಣ ಹುಲಿನಾಯ್ಕರ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಹರೇಂದ್ರಕುಮಾರ್. ಆಸ್ಪತ್ರೆಯ ಅಧೀಕ್ಷರಾದ ಡಾ. ಮೋಹನಕುಮಾರ್, ಉಪಪ್ರಾಂಶುಪಾಲರಾದ ಡಾ. ರೇಖಾ ಗುರುಮೂರ್ತಿ, ನೇತ್ರವಿಭಾಗದ ಮುಖ್ಯಸ್ಥರೂ ಮತ್ತು ಪ್ರಾಧ್ಯಾಪಕರಾಗಿರುವ ಡಾ. ಲಾವಣ್ಯ ರಮಣ, ಡಾ. ರವೀಶ್‌ಕುಮಾರ್, ಡಾ. ಹೇಮಂತ್ ಮತ್ತು ವೈದ್ಯಕೀಯ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

▪ ವರದಿ: ಶೃತಿ ಬೆಳ್ಳಿಯಾರ್ ಹೆಚ್.ವಿ.

# ಕೊಲೊಸ್ಟ್ರಮ್ ಎಂಬ ಹಳದಿ ಬಣ್ಣದ ಜೀವ ರಕ್ಷಾಕವಚ

“ಮಗು ಜನಿಸಿದ ತಕ್ಷಣದ ಮೊದಲ ಕೆಲವು ಗಂಟೆಯೊಳಗೆ ತಾಯಿಯಲ್ಲಿ ಉತ್ಪತ್ತಿಯಾಗುವ ಎದೆಹಾಲು ‘ಕೊಲೊಸ್ಟ್ರಮ್’ ಬಗ್ಗೆ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ತಪ್ಪು ಕಲ್ಪನೆಗಳಿದ್ದು, ಇದನ್ನು ಬಹಳ ಜರೂರಾಗಿ ತೊಡೆದುಹಾಕಬೇಕಿದೆ.” ಹೇಳಿದ ಸಂದರ್ಭ: ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜು ವತಿಯಿಂದ ಏರ್ಪಡಿಸಿದ್ದ ಸ್ತನ್ಯಪಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದ ಮೆಡಿಕಲ್ ಕಾಲೇಜಿನ ಡೈರೆಕ್ಟರ್ ಡಾ. ರಮಣ್ ಹುಲಿನಾಯ್ಕರ್ ಈ ಮಾತು ಹೇಳಿದ್ದಾರೆ. ಮಾತು ಮುಂದುವರಿಸಿದ ಶ್ರೀಯುತರು “ಸ್ತನ್ಯಪಾನಕ್ಕೆ ಮೊದಲ ಆದ್ಯತೆ ಎಂಬುದು ಈ ವರ್ಷದ ಘೋಷ ವಾಕ್ಯವಾಗಿದೆ. ಮಗುವಿಗೆ ಎದೆಹಾಲು ಉಣಿಸುವುದರಿಂದ ಸೌಂದರ್ಯಕ್ಕೆ ಧಕ್ಕೆಯಾಗಲಿದೆ ಎಂಬ ತಪ್ಪು ಕಲ್ಪನೆ ಸಮಾಜದಲ್ಲಿ ಬೇರೂರಿದೆ; ಇದು ಸರಿಯಲ್ಲ ಮತ್ತು ಇದರಲ್ಲಿ ಯಾವುದೇ ಹುರುಳಿಲ್ಲ. ತಾಯಿಯ ಎದೆ ಹಾಲು ಅಮೃತಕ್ಕೆ ಸಮಾನವಾಗಿದ್ದು ಮಗುವಿನ ಸಮಗ್ರ ಬೆಳವಣಿಗೆಗೆ ಅತ್ಯಗತ್ಯ. ಶಿಶು ಜನನದ ನಂತರದ ತಾಯಿಯಲ್ಲಿ ಮೊದಲಿಗೆ ಉತ್ಪತ್ತಿಯಾಗುವ ಎದೆಹಾಲು ‘ಕೊಲೊಸ್ಟ್ರಮ್’ ಬಗ್ಗೆಯೂ ಸಮಾಜದಲ್ಲಿ ಕೆಲವು ಮೌಢ್ಯಗಳಿವೆ. ವಾಸ್ತವವಾಗಿ, ಮಗುವಿನ ಬೆಳವಣಿಗೆಗೆ ಬೇಕಾದ ಪ್ರೊಟೀನ್, ವಿಟಮಿನ್ ಮತ್ತು ಪೋಷಕಾಂಶಗಳು ಕೊಲೊಸ್ಟ್ರಮ್‌ನಲ್ಲಿ ಸಮೃದ್ಧವಾಗಿರುತ್ತದೆ. ಈ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಲು ಕಾಲೇಜಿನ ಬೇರೆ-ಬೇರೆ ವಿಭಾಗಗಳು ಈ ಸ್ತನ್ಯಪಾನ ಸಪ್ತಾಹ ಹಮ್ಮಿಕೊಂಡಿರುವುದು ಸಮಯೋಚಿತ ಹಾಗೂ ಅರ್ಥಪೂರ್ಣವಾಗಿದೆ” ಎಂದರು.

ತುಮಕೂರು ಮಹಾನಗರ ಪಾಲಿಕೆ ಅಧಿಕಾರಿ ನಜ್ಮಾ ಮಾತನಾಡಿ, “ತಾಯಿಗೆ ಯಾವುದೇ ಅನಾರೋಗ್ಯ ಪರಿಸ್ಥಿತಿಯಿದ್ದರೂ ಅದು ಮಗುವಿಗೆ ಎದೆಹಾಲಿನ ಮೂಲಕ ಪ್ರಸರಣವಾಗದಿರುವುದು ಒಂದು ಅಚ್ಚರಿಯಾಗಿದೆ; ತಾಯಿಯ ಎದೆಹಾಲು ಮಗುವಿನ ಪಾಲಿಗೆ ದೇವರೇ ನೀಡಿರುವ ವರ ಎಂಬುದನ್ನು ಇದು ಸೂಚಿಸುತ್ತದೆ; ಎದೆಹಾಲಿನಿಂದ ಮಗುವಿನ ಸಮತುಲಿತ ಪೋಷಕಾಂಶ ಲಭ್ಯವಾಗಿ ರೋಗನಿರೋಧಕ ಶಕ್ತಿ ಬೆಳೆಯುತ್ತದೆ; ಜೊತೆಗೆ, ಶಾರೀರಿಕ ಹಾಗೂ ಮಾನಸಿಕ ದೃಢತೆಯೊಂದಿಗೆ ಮಗು ಬೆಳೆಯಲು ಇದು ಸಹಕಾರಿ” ಎಂದರು.

ಹೆರಿಗೆಯಾದ ತಕ್ಷಣ ಮಗುವಿಗೆ ಎದೆಹಾಲು ಉಣಿಸುವಾಗ ಹಳದಿ ಬಣ್ಣದ ದ್ರವವು ಸ್ತನದಿಂದ ಸ್ರವಿಸುತ್ತದೆ. ಇದನ್ನು ಕೊಲೊಸ್ಟ್ರಮ್ ಎಂದು ವೈದ್ಯಕೀಯ ಭಾಷೆಯಲ್ಲಿ ಹೇಳುತ್ತಾರೆ. ಈ ದ್ರವವು ಹೆರಿಗೆಯಾದ ಎರಡು, ಮೂರು ದಿನಗಳ ಒಳಗಿನ ಅವಧಿಯಲ್ಲಿ ಬರುವ ವಿಶೇಷ ಹಾಲು. ಇದು ಅಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಆ ವೇಳೆಯಲ್ಲಿ ಕೂಸಿಗೆ ಇಷ್ಟು ಪ್ರಮಾಣ ಸಾಕು. ಈ ಹಾಲಿನಲ್ಲಿ ಇಂಟರ್‌ಫೆರಾನ್ ಎಂಬ ಪ್ರೋಟಿನ್ ಅಧಿಕವಾಗಿರುತ್ತದೆ. ಎಳೆಯ ಮಕ್ಕಳನ್ನು ಕಾಡುವ ಅನೇಕ ವೈರಸ್‌ಗಳಿಗೆ ಈ ಪ್ರೋಟಿನ್ ರಾಮಬಾಣ. ಹಾಗೆಯೇ ಇದರಲ್ಲಿನ ಫೈಬ್ರೋನೆಕ್ಟಿವರ ಅಂಶವು ಮಗುವಿನ ದೇಹರಕ್ಷಣಾ ಪಡೆಯ ಜೀವಕೋಶಗಳಿಗೆ ವಿಶೇಷ ಶಕ್ತಿಯನ್ನು ಪೂರೈಸಲಿದೆ. ಎ, ಸಿ, ಡಿ, ಜೀವಸತ್ವಗಳು ಮಗುವನ್ನು ಇರುಳುಗಣ್ಣು, ರಿಕೆಟ್ಸ್‌ನಂಥ ಅನೇಕ ಗಂಭೀರ ರೋಗಗಳಿಂದ ದೂರವಿಡುತ್ತದೆ. ಈ ಎದೆಹಾಲು ಮಗುವಿನ ಆರೋಗ್ಯವನ್ನು ವರ್ಧಿಸಿ ಜೊತೆಜೊತೆಗೇ ತಾಯಿ ಮಗುವಿನ ಆತ್ಮೀಯತೆ, ಪ್ರೀತಿಯನ್ನು ಪರಸ್ಪರ ಜಾಸ್ತಿಮಾಡುತ್ತದೆ. ಮಗು ಬೆಳೆದಂತೆ ಅದರ ಆಹಾರ ಸೇವನೆಯ ಪ್ರಮಾಣವೂ ಹೆಚ್ಚುತ್ತದೆ. ಆಗ ತಾಯಿ ಎದೆಯಲ್ಲಿ ಸಾಕಷ್ಟು ಪ್ರಮಾಣದ ಹಾಲು ಸ್ರವಿಕೆಯಾಗುತ್ತದೆ. ಹೀಗೆ ಸ್ರವಿಸಲ್ಪಟ್ಟ ಹಾಗೂ ತಿಳಿಯಾಗಿರುವ ಹಾಲು ಸಾಕಷ್ಟು ಪ್ರಮಾಣದಲ್ಲಿ ದಿನಪೂರ್ತಿ ಲಭ್ಯವಿರುತ್ತದೆ. ಇದಕ್ಕೆ ಕಾರಣ ಅದರಲ್ಲಿರುವ ಲ್ಯಾಕ್ಟೋಸ್ ಅಂಶ. ಇದು ಮಗುವಿನ ಮಿದುಳು ಹಾಗೂ ಮಾನಸಿಕ ಬೆಳವಣಿಗೆಗೆ ಅತ್ಯವಶ್ಯ.




ಇಂತಹ ಎದೆಹಾಲು ಕುಡಿದು ಬೆಳೆದ ಮಕ್ಕಳು ವಯಸ್ಸಾದ ಮೇಲೆ ಬರುವ ಸಕ್ಕರೆ ಕಾಯಿಲೆ, ರಕ್ತನಾಳ ಗಡುಸಾಗುವಿಕೆ ಮುಂತಾದ ರೋಗಗಳಿಗೆ ತುತ್ತಾಗುವ ಸಾಧ್ಯತೆ ಕಡಿಮೆ ಎಂಬುದನ್ನು ಅನೇಕ ವೈದ್ಯಕೀಯ ಅಧ್ಯಯನಗಳು ರುಜುವಾತುಪಡಿಸಿವೆ.

ಈ ಕಾರ್ಯಕ್ರಮದಲ್ಲಿ ನೇತ್ರ ತಜ್ಞೆ ಡಾ. ಲಾವಣ್ಯ, ಶ್ರೀದೇವಿ ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಪಿ.ಎಂ. ರವೀಶ್ ಡಾ. ಕುಸುಮ ಡಾ. ಸೌಂದರ್ಯ, ಡಾ. ಸೌಜನ್ಯ ಆಸ್ಪತ್ರೆಯ ಮಕ್ಕಳ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಪಲ್ಲವಿ, ಡಾ. ಶಿಲ್ಪಶ್ರೀ, ಕಾರ್ತಿಕ್, ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ. ಎಂ.ಎಲ್. ಹರೇಂದ್ರ ಕುಮಾರ್, ಆಸ್ಪತ್ರೆಯ ವೈದ್ಯಕೀಯ ಅಧ್ಯಕ್ಷಕ ಡಾ. ಕೆ. ಮೋಹನ್ ಕುಮಾರ್, ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊಫೆಸರ್ ಆರ್. ಕೆ. ಮುನಿಸ್ವಾಮಿ , ಪ್ರೊಫೆಸರ್ ಉಷಾ, ಪ್ರೊಫೆಸರ್ ಅಂಬಾ ಭಾಗವಹಿಸಿದ್ದರು.

# ಅವಧೂತ ಗಟ್ಟಹಳ್ಳಿ ಶ್ರೀಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ

▶▶ ಮೊದಲನೇ ಪುಟದಿಂದ

ಹಳ್ಳಿಗಳಲ್ಲಿ ಸಂಚಾರ ಮಾಡುವಾಗ ಈ ಪದಗಳನ್ನು ಅವರು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕಿವಿಗೆ, ಮನಸ್ಸಿಗೆ ಹಿತವಾದ ಈ ಪದಗಳನ್ನು ಸಾಮಾನ್ಯರೂ, ಅದರಲ್ಲಿಯೂ ಮಹಿಳೆಯರು, ವಿಶೇಷವಾಗಿ ಹಾಡಿಕೊಳ್ಳಲು ಪ್ರಾರಂಭಿಸಿದರು. ಇದರಿಂದ ಸ್ವಾಮೀಜಿಗಳ ಕೀರ್ತಿ ಸುತ್ತಮುತ್ತಿನ ಹಳ್ಳಿಗಳಲ್ಲೆಲ್ಲಾ ಪ್ರಸಾರವಾಯಿತು. ಅವರ ಬಳಿ ಆನೇಕರು ಬಂದು ಅವರ ಶಿಷ್ಯರಾದರು.

ಅಧ್ಯಾತ್ಮದ ಹಾದಿಯಲ್ಲಿ ಮುಂಬರಿಯಲು ಬಯಸುವವರನ್ನು ಭೌತಿಕ ದೂರದ ಸೀಮಿತತೆಗೆ ಒಳಗಾಗದೆ ತಮ್ಮ ಬಳಿ ಕರೆಸಿಕೊಳ್ಳುವ ಸ್ವಾಮೀಜಿಗಳ ಮಹಿಮೆಯನ್ನು ತಿಳಿಸುವಂತೆ ದೂರದ ಅಮೆರಿಕಾ ನಿವಾಸಿಯಾದ ಶ್ರೀಮತಿ ಹೆಲೆನ್ ಎಸ್. ವ್ರೀಲ್ಯಾಂಡ್ ಸ್ವಾಮೀಜಿಗಳನ್ನು ಹುಡುಕಿಕೊಂಡು ಗಟ್ಟಹಳ್ಳಿಗೆ ಬಂದು ಅವರ ಕೃಪೆಗೆ ಪಾತ್ರರಾಗಿ, ಅವರಿಂದ ದೀಕ್ಷೆಯನ್ನು ಪಡೆದುದು ಪವಾಡವೇ ಸರಿ.

ಬರೆಯಲು ಬಾರದ ಸ್ವಾಮೀಜಿಗಳು ದೈವಾನುಗ್ರಹದಿಂದ ಬರವಣಿಗೆಯನ್ನೂ ಕರಗತ ಮಾಡಿಕೊಂಡು ತಮ್ಮ ಕೃತಿಗಳನ್ನು ಸ್ವಹಸ್ತದಲ್ಲಿಯೇ ಬರೆದಿದ್ದಾರೆ. ಇದರ ಜೊತೆಗೆ ಆರ್ತರ ಉದ್ಧಾರಕ್ಕಾಗಿ ಹಲವಾರು ಪವಾಡಗಳನ್ನು ಮಾಡಿದ್ದಾರೆ. ಆದರೂ ಅವರು ಸ್ವಾರ್ಥಕ್ಕಾಗಿ, ಪ್ರಚಾರಕ್ಕಾಗಿ ಯಾವುದನ್ನೂ ಮಾಡಲಿಲ್ಲವೆನ್ನುವುದು ಅವರ ಔನ್ನತ್ಯವನ್ನು ತೋರಿಸುತ್ತದೆ.


ಗ್ರಂಥಕರ್ತರಾದ ಡಾ. ಕಮಲೇಶ್‌ಅವರು ಇದೆಲ್ಲವನ್ನೂ ಸರಳವಾಗಿ ಆದರೆ ಮನದಟ್ಟುವಂತೆ ಈ ಗ್ರಂಥದಲ್ಲಿ ವಿವರಿಸಿದ್ದಾರೆ.

## ಗುರುವಿಗೆ ಅರ್ಪಣೆ

ಇನ್ನು ಎರಡನೆಯ ಭಾಗದಲ್ಲಿ ಶ್ರೀ ಅಂಜನಪ್ಪಸ್ವಾಮಿಗಳ ಅಂತರಂಗದ ಶಿಷ್ಯರಾದ ಶ್ರೀ ಬಿ.ಪಿ ರೇವಣ್ಣ ಅವರನ್ನು ಕುರಿತು ಗ್ರಂಥಕರ್ತರು ಬರೆದಿದ್ದಾರೆ. ಶೈಶವದಲ್ಲಿಯೇ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಸರೆಯಲ್ಲಿ ಬೆಳೆದ ರೇವಣ್ಣ ಅವರು ಅಧ್ಯಾತ್ಮದತ್ತ ಬಾಲ್ಯದಲ್ಲಿಯೇ ಒಲವನ್ನು ಬೆಳಸಿಕೊಂಡಂತಹವರು. ಪದವಿಯ ಅನಂತರ, ಪೊಲೀಸ್ ಇಲಾಖೆಗೆ ಸೇರಿದ ಅವರು ಮೈಸೂರು ರಾಜ್ಯದ ಹಲವಾರು ಕಡೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸಿದರು. ತಮ್ಮ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಡಿಐಜಿ ಹುದ್ದೆಗೆ ಏರಿ ನಿವೃತ್ತರಾದರು. ದೇಶದಾದ್ಯಂತ ಸುದ್ದಿಯಾಗಿದ್ದ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಅವರ ಕೊಲೆಯ ಅಪರಾಧಿಗಳನ್ನು ಅತ್ಯಲ್ಪ ಕಾಲದಲ್ಲಿಯೇ ಹಿಡಿದು ಅದಕ್ಕೆ ಶಿಕ್ಷೆಯನ್ನು ಕೊಡಿಸಿದ ಕೀರ್ತಿ ಅವರದು. ಅದಕ್ಕೆ ರಾಷ್ಟ್ರಪತಿ ಪದಕವನ್ನು ಪಡೆದ ದಕ್ಷ ಅಧಿಕಾರಿ ಅವರು. ಪೊಲೀಸ್ ಇಲಾಖೆಯಲ್ಲಿದ್ದರೂ ಎಂದೂ ಅವರು ಯಾರೊಡನೆಯೂ ದರ್ಪದಿಂದ ವರ್ತಿಸುತ್ತಿರಲಿಲ್ಲ. ತಮ್ಮ ಅನುಭವದ ಆಸ್ತಿಯನ್ನು ಇಲಾಖೆಯಲ್ಲಿದ್ದ ಕಿರಿಯ ಅಧಿಕಾರಿಗಳನ್ನು ತರಬೇತು ಮಾಡುವುದಕ್ಕಾಗಿ ವಿನಿಯೋಗಿಸಿದರು.



ಭಾರತದ ರಾಷ್ಟ್ರಪತಿ ಡಾ. ಬಾಬುರಾಜೇಂದ್ರ ಪ್ರಸಾದ್ ಅವರು ಬೆಂಗಳೂರಿಗೆ ಆಗಮಿಸಿದಾಗ ಅವರಿಗೆ ಸಾಂಪ್ರದಾಯಿಕ ಸ್ವಾಗತ ಕೋರುತ್ತಿರುವವರು ಹಿರಿಯ ಪೊಲೀಸ್ ಅಧಿಕಾರಿ ಬಿ.ಪಿ. ರೇವಣ್ಣ.



1938ರಲ್ಲಿ ಪರಮಹಂಸ ಅಂಜನಪ್ಪಸ್ವಾಮಿಗಳ ಆಪ್ತಶಿಷ್ಯರಾದ ಪೊಲೀಸ್ ಅಧಿಕಾರಿ ಶ್ರೀ ಬಿ.ಪಿ. ರೇವಣ್ಣ.

ತಮ್ಮ ಸಹಾಯಕರೊಬ್ಬರಿಂದ ಶ್ರೀಅಂಜನಪ್ಪಸ್ವಾಮೀಜಿಯವರ ಸಂಪರ್ಕಕ್ಕೆ ಬಂದು ಅವರ ಸೇವೆಯನ್ನು ನಿಷ್ಕಲ್ಮಷ ಹೃದಯದಿಂದ ಹಾಗೂ ನಿಸ್ವಾರ್ಥದಿಂದ ಮಾಡಿ ರೇವಣ್ಣನವರು ಸ್ವಾಮೀಜಿಯವರ ಅಂತರಂಗದ ಶಿಷ್ಯರಾದರು. "ತಾವು ಲೌಕಿಕ ತೊಳಲಾಟದಲ್ಲಿ ಒದ್ದಾಡಲು ಜನ್ಮತಾಳಿದವರಲ್ಲ ಎನ್ನುವ ಮನೋಧರ್ಮದ ರೇವಣ್ಣ ಅವರು ಅಧ್ಯಾತ್ಮದ ಮಹಾಸಾಗರವಾಗಿದ್ದ ಅಂಜನಪ್ಪಸ್ವಾಮಿಗಳಿಗೆ ಶರಣಾದರು ಮತ್ತು ಸ್ವಾಮೀಜಿಗಳ ಜೀವನದ ಅವಿಭಾಜ್ಯ ಅಂಗವಾದರು" ಎಂದು ಗ್ರಂಥಕರ್ತರು ಹೇಳಿರುವುದು ಅಕ್ಷರಶಃ ಸತ್ಯ. ಅವರಲ್ಲಿ ಮೊದಲಿನಿಂದಲೂ ಇದ್ದ ಮಾನವೀಯತೆಯು ಸ್ವಾಮೀಜಿಗಳ ಸಂಪರ್ಕಕ್ಕೆ ಬಂದ ಮೇಲೆ ಇನ್ನೂ ಗಾಢವಾಯಿತು. ಅವರು ಜೀವನದ ಸಂಕಷ್ಟಗಳಿಂದ ನೊಂದಿದ್ದ ಹಲವಾರು ಜನರನ್ನು ಸ್ವಾಮೀಜಿಗಳ ಸಂಪರ್ಕಕ್ಕೆ ತಂದು, ಅವರ ನೋವುಗಳನ್ನು ಪರಿಹರಿಸುವುದಕ್ಕೆ ಕಾರಣರಾಗಿದ್ದರು. ಅಷ್ಟೇ ಅಲ್ಲದೆ, ಸ್ವಾಮಿಗಳು ಈ ಲೋಕವನ್ನು ತ್ಯಜಿಸಿದ ಮೇಲೆಯೂ, ಅನೇಕ ಜನರ ಸಂಕಷ್ಟಗಳನ್ನು ಸ್ವಾಮೀಜಿಗಳ ಹೆಸರಿನಲ್ಲಿ ತಾವೇ ಪರಿಹರಿಸುತ್ತಿದ್ದರು. ತಮ್ಮದೆಲ್ಲವನ್ನೂ ಸ್ವಾಮೀಜಿಗಳ ಆಶ್ರಮಕ್ಕಾಗಿ ದಾನ ಮಾಡಿದ ಅವರು, ಅದನ್ನು ಎಂದೂ ಪ್ರಚಾರಕ್ಕೆ ಬಳಸಿಕೊಳ್ಳಲಿಲ್ಲ. ಅಂಜನಪ್ಪಸ್ವಾಮಿಗಳ ಕೀರ್ತನೆಗಳನ್ನು ಪುಸ್ತಕದ ರೂಪದಲ್ಲಿ ಪ್ರಕಾಶಪಡಿಸಿ, ಅವರ ಜೀವನಚರಿತ್ರೆಯನ್ನು ಬರೆಸಿ, ಅವರ ಬಗೆಗೆ ಒಂದು ಹರಿಕಥೆಯನ್ನು ಬರೆಸಿ ಸ್ವಾಮೀಜಿಗಳ ಮಹಿಮೆಯನ್ನು ಪ್ರಚಾರ ಮಾಡುವುದರಲ್ಲಿ ತೊಡಗಿದ್ದರು.

ರೇವಣ್ಣ ಹಾಗೂ ಅವರ ಪತ್ನಿ ಸಿದ್ಧಮ್ಮ ಇಬ್ಬರದ್ದೂ ಸ್ವಾಮೀಜಿಗಳ ಸೇವೆಗೆ ಮತ್ತು ಆಶ್ರಮಕ್ಕೆ ಮುಡುಪಾಗಿಟ್ಟ ಜೀವಗಳಾಗಿದ್ದವು. ರೇವಣ್ಣ ಅವರು ಅಂಜನಪ್ಪಸ್ವಾಮೀಜಿಗಳ ಮತ್ತು ಜನತೆಯ ನಡುವೆ ಸಂಪರ್ಕದ ಸೇತುವೆಯಾಗಿದ್ದರು. ರೇವಣ್ಣ ಅವರ ಸಂಪರ್ಕದ ಕಾರಣದಿಂದ ಸ್ವಾಮೀಜಿಗಳ ಅನುಗ್ರಹಕ್ಕೆ ಪಾತ್ರರಾದ ಅನೇಕರು ರೇವಣ್ಣ ಅವರ ಬಗೆಗೂ ಸ್ವಾಮೀಜಿಗಳಲ್ಲಿದ್ದಷ್ಟೇ ಭಕ್ತಿ, ಗೌರವವನ್ನು ಹೊಂದಿದ್ದರು.

## ಗುರು ಮತ್ತು ತಂದೆಯ ಆದರ್ಶದ ಪಾಲನೆ

ಮೂರನೆಯ ಭಾಗದಲ್ಲಿ ಗ್ರಂಥಕರ್ತರು ರೇವಣ್ಣ ಅವರ ಪುತ್ರಿ ಡಾ. ಜಯಮ್ಮನವರನ್ನು ಕುರಿತು ಬರೆದಿದ್ದಾರೆ. ವೈದ್ಯರಾದ ಡಾ. ಜಯಮ್ಮನವರು, ತಮ್ಮ ತಂದೆಯಂತೆಯೇ ಅಂಜನಪ್ಪಸ್ವಾಮೀಜಿಗಳಿಗೆ ಮತ್ತು ಅವರ ಆಶ್ರಮಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಾ ರೇವಣ್ಣನವರ ದಿವ್ಯ ಪರಂಪರೆಯನ್ನು ಮುನ್ನಡೆಸುತ್ತಿದ್ದಾರೆ. ರೇವಣ್ಣ ಅವರ ಮರಣಾನಂತರ ಗಟ್ಟಹಳ್ಳಿ ಆಶ್ರಮದ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡ ಡಾ. ಜಯಮ್ಮ ಅವರು, ರೇವಣ್ಣ ಅವರ ಪುತ್ರಿಯಾಗಿದ್ದ ಹಾಗೆಯೇ ಸ್ವಾಮೀಜಿಯವರ ಮಾನಸಪುತ್ರಿಯೂ ಆಗಿದ್ದಾರೆ. ಅವರು ಆಶ್ರಮಕ್ಕೆ ಬರುವ ಸುತ್ತಲಿನ ಹಳ್ಳಿಯವರಿಗೆ ಉಚಿತವಾಗಿ ವೈದ್ಯಕೀಯ ನೆರವನ್ನು ನೀಡುತ್ತಿದ್ದಾರೆ. ಅವರ ಮೇಲೆ ಸ್ವಾಮೀಜಿಯವರ ಸಂಪೂರ್ಣ ಆಶೀರ್ವಾದ ಇದೆ. ತಾವು ವೈದ್ಯೆಯಾಗಿದ್ದರೂ, ಇಂದಿಗೂ ತಮ್ಮ ತಂದೆಯವರಂತೆಯೇ ಸರಳ ಜೀವನವನ್ನು ತಮ್ಮದಾಗಿಸಿಕೊಂಡಿರುವ ಹಾಗೂ ಅಧ್ಯಾತ್ಮದತ್ತ ಒಲವನ್ನು ಬೆಳಸಿಕೊಂಡು ಕೊಲ್ಕತ್ತಾದ ಬೇಲೂರು ರಾಮಕೃಷ್ಣಮಠದ ಯೋಗಿನಿ ಪೂಜ್ಯ ಶ್ರದ್ಧಾಪ್ರಾಣ್ ಮಾತಾಜಿಯವರಿಂದ ದೀಕ್ಷೆಯನ್ನು ಪಡೆದಿರುವ ಡಾ. ಜಯಮ್ಮ ಅವರು ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಶ್ರೀದೇವಿ ಚಾರಿಟಬಲ್ ಟ್ರಸ್ಟ್ ನೀಡುತ್ತಿರುವ 'ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿಗೆ' ಸರ್ವವಿಧದಲ್ಲಿಯೂ ಅರ್ಹರಾದ ವ್ಯಕ್ತಿಯಾಗಿದ್ದಾರೆ.



ಅನುಭವಶೀಲರಾಗಿರುವ ಡಾ.ಬಿ.ಆರ್.ಜಯಮ್ಮ

> ❝
> ನಾನು ಮತ್ತು ನನ್ನವರಾದ ಡಾ.ಹುಲಿನಾಯ್ಕರ್ ಅವರ ಕನಸು ಮತ್ತು ಸಂಕಲ್ಪದ ಫಲವಾಗಿ ಶ್ರೀದುರ್ಗಾಂಬಿಕಾ ದೇವಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣಕ್ಕೆ ತನ್ನ ಸಂಪೂರ್ಣ ಶಕ್ತಿಯೊಂದಿಗೆ ಬಂದು ನೆಲಸಿ ತನ್ನ ಭಕ್ತರನ್ನು ನಿರಂತರವಾಗಿ ಆಶೀರ್ವಾದ ಮಾಡುತ್ತಿದ್ದಾಳೆ. ಆಕೆಯ ಕರುಣೆ ಅಪಾರ. ಅವಳ ಇರುವಿಕೆಯನ್ನು ನಾವು ಅನುಭವಿಸುತ್ತಿದ್ದೇವೆ. ನನ್ನ ತಂದೆ ತಂದೆ-ತಾಯಿಗಳಿಂದಾಗಿ ಪೂಜ್ಯಶ್ರೀ ರಮಣ ಮಹರ್ಷಿಗಳ ಆರಾಧನೆ ನನಗೆ ಒಲಿದು ಬಂತು. ಪೂಜ್ಯ ಶ್ರೀ ರಮಣ ಮಹರ್ಷಿಗಳು ಮಾತಿಲ್ಲದೆ ಮೌನದಿಂದಲೇ ಆಶೀರ್ವಾದ ಮಾಡುವವರು. ಅವರ ಆಶೀರ್ವಾದ ಫಲವನ್ನು ನಾವು ಉಂಡಿದ್ದೇವೆ. ಶ್ರೀದುರ್ಗಾಂಬಿಕಾ ದೇವಿ ಮತ್ತು ಪೂಜ್ಯ ರಮಣ ಮಹರ್ಷಿಗಳು ಹೀಗೆ ಲೋಕ ಕಲ್ಯಾಣವನ್ನುಂಟು ಮಾಡುತ್ತಿರಲಿ...
>
> **ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್**



## ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ-2025 ಮತ್ತು ಗ್ರಂಥ ಲೋಕಾರ್ಪಣೆ

**ದಿನಾಂಕ: 06.09.2025 ಶನಿವಾರ ಬೆಳಗ್ಗೆ 10.30 ಘಂಟೆಗೆ**

**ಸ್ಥಳ: ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣ, ಶಿರಾಗೇಟ್, ತುಮಕೂರು**

ದಿವ್ಯ ಸಾನಿಧ್ಯ:
**ಪೂಜ್ಯಶ್ರೀ ಯೋಗೀಶ್ವರಾನಂದ ಮಹಾಸ್ವಾಮಿಗಳು**
ರಾಮಕೃಷ್ಣ ಯೋಗಾಶ್ರಮ, ರಾಮೋಹಳ್ಳಿ, ಕೆಂಗೇರಿ

ಉದ್ಘಾಟನೆ
**ಮಾನ್ಯ ಶ್ರೀ ಎಚ್.ಎಂ.ರೇವಣ್ಣ**
ಮಾಜಿ ಸಚಿವರು, ಅಧ್ಯಕ್ಷರು, ಗ್ಯಾರಂಟಿಗಳ ಅನುಷ್ಠಾನ ಸಮಿತಿ, ಕರ್ನಾಟಕ ಸರ್ಕಾರ

ಡಾ.ಕೆ.ಆರ್.ಕಮಲೇಶ್ ರಚಿಸಿದ
**'ಅವಧೂತ ಗಟ್ಟಹಳ್ಳಿ ಶ್ರೀ ಅಂಜನಪ್ಪಸ್ವಾಮಿಗಳು ಮತ್ತು ಅವರ ಪರಂಪರೆ'**

ಗ್ರಂಥದ ಲೋಕಾರ್ಪಣೆ:
**ಮಾನ್ಯ ಶ್ರೀ ರಾಧಾಕೃಷ್ಣ ದೊಡ್ಡಮನಿ**
ಲೋಕಸಭಾ ಸದಸ್ಯರು (ಗುಲ್ಬರ್ಗಾ)

ಮೊದಲ ಪ್ರತಿ ಸ್ವೀಕಾರ:
**ಮಾನ್ಯ ಶ್ರೀ ಅಸಗೋಡು ಜಯಸಿಂಹ**
ಅಧ್ಯಕ್ಷರು, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಲಿ

ಗ್ರಂಥದ ಪರಿಚಯ:
**ಮಾನ್ಯ ಶ್ರೀ ಡಿ.ಡಿ. ಮಾಳಗಿ**
ನಿವೃತ್ತ ಡಿವೈ.ಎಸ್.ಪಿ. ಮತ್ತು ನಿಕಟ ಪೂರ್ವ ಅಧ್ಯಕ್ಷರು, ಶ್ರೀಸಿದ್ಧಾರೂಢ ಮಠ, ಹುಬ್ಬಳ್ಳಿ

**'ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿ 2025'**

ಪ್ರಶಸ್ತಿ ಪುರಸ್ಕೃತರು
**ಡಾ. ಬಿ.ಆರ್. ಜಯಮ್ಮ**
ಸ್ತ್ರೀರೋಗ ತಜ್ಞರು ಹಾಗೂ ಧರ್ಮಾಧಿಕಾರಿಗಳು, ಶ್ರೀಅಂಜನಪ್ಪಸ್ವಾಮಿ ಟ್ರಸ್ಟ್ ಗಟ್ಟಹಳ್ಳಿ, ಕೋಲಾರ (ಗ್ರಾ.)

ಪ್ರಶಸ್ತಿ ಪ್ರದಾನ
**ಡಾ. ಆಚಾರ್ಯ ಎಂ. ನಾಗರಾಜ್**
ಸಂಸ್ಥಾಪಕರು, ಸುವರ್ಣಮುಖಿ ಸಂಸ್ಕೃತಿಧಾಮ, ವಡೇರಹಳ್ಳಿ.

ಉಪಸ್ಥಿತಿ
**ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್**
ಮ್ಯಾನೇಜಿಂಗ್ ಟ್ರಸ್ಟಿ

ಅಧ್ಯಕ್ಷತೆ
**ಡಾ. ಎಂ.ಆರ್. ಹುಲಿನಾಯ್ಕರ್**
ಸಂಸ್ಥಾಪಕ ಅಧ್ಯಕ್ಷರು, ಶ್ರೀದೇವಿ ಶಿಕ್ಷಣ ಸಂಸ್ಥೆ

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**